ಉಪನ್ಯಾಸ ಗ್ರಂಥಮಾಲೆ

೯೩

ಪ್ರಾಚೀನ ಭಾರತದಲ್ಲಿ ಶ್ರಮಜೀವಿಗಳು

ಎಸ್. ಜಿ. ಘಟಪಣದಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಏಪ್ರಿಲ್, ೧೯೭೦

ಉಪನ್ಯಾಸ ಗ್ರಂಥಮಾಲೆ

೯೩

ಪ್ರಾಚೀನ ಭಾರತದಲ್ಲಿ ಶ್ರಮಜೀವಿಗಳು

ಎಸ್. ಜಿ. ಘಟಪಣದಿ,

ಎಮ್. ಎ., ಡಿಪ್. ಇನ್ ಎಪಿ.

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

ಏಪ್ರಿಲ್, ೧೯೭೦

ಪ್ರಕಾಶಕರು:
ಎಸ್. ಎಸ್. ಒಡೆಯರ, ಎಂ. ಎ., ಎಲ್‌ಎಲ್. ಬಿ.
ರಜಿಸ್ಟ್ರಾರ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪ್ರಥಮ ಮುದ್ರಣ, ೧೯೬೦
೫,೦೦೦ ಪ್ರತಿಗಳು

ಬೆಲೆ: ೨೫ ಪೈಸೆ

ಮುದ್ರಕರು:
ಸಹಕಾರಿ ಮುದ್ರಣಾಲಯ,
ಗದಗ.

ಮುನ್ನುಡಿ

ನಮ್ಮ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗವು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ ತಿಂಗಳು ಏರ್ಪಡಿಸುತ್ತಿರುವ ಉಪನ್ಯಾಸ ಶಿಬಿರಗಳು ದಿನೇ ದಿನೇ ಜನಪ್ರಿಯವಾಗುತ್ತ ಸಾಗಿರುವುದು ನಿಜವಾಗಿಯೂ ಸಂತೋಷದ ಸಂಗತಿ. ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗವಹಿಸುವುದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವುದಲ್ಲದೆ ಎಂಥ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭವಾದ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ತೊಂಬಂತ್ತೊಂದು ಪುಸ್ತಕಗಳು ಪ್ರಕಟವಾಗಿವೆ. ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ಮೂರು ನಾಲ್ಕು ಮುದ್ರಣಗಳನ್ನೂ ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಧನಸಹಾಯ ಆಯೋಗದವರು ಉಪನ್ಯಾಸ ಶಿಬಿರಗಳಿಗೂ, ಈ ಪುಸ್ತಿಕೆಗಳ ಪ್ರಕಟನೆಗೂ ನೆರವು ನೀಡುತ್ತಿದ್ದು ಅವರಿಗೆ ವಿಶ್ವವಿದ್ಯಾಲಯವು ತನ್ನ ಕೃತಜ್ಞತೆಗಳನ್ನು ಸೂಚಿಸುತ್ತದೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖವಾದ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಎ. ಎಸ್. ಅಡಕೆ
ಉಪಕುಲಪತಿ
ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ
೧—೩—೧೯೭೦

ಲೇಖಕನ ಮಾತು

ವ್ಯಾಸಂಗ ವಿಸ್ತರಣೋಪನ್ಯಾಸ ಮಾಲೆಯ ಅಂಗವಾಗಿ ಕರ್ನಾಟಕ ವಿಶ್ವವಿದ್ಯಾಲಯದವರು ಅರಳಿಕಟ್ಟಿ ಗ್ರಾಮದಲ್ಲಿ ಏರ್ಪಡಿಸಿದ ಉಪನ್ಯಾಸ ಮಾಲಿಕೆಯಲ್ಲಿ ನಾನು ಮಾಡಿದ ಭಾಷಣವನ್ನು ವಿಸ್ತೃತ ರೂಪದಲ್ಲಿ ಈಗ ಓದುಗರ ಕೈಯಲ್ಲಿಡಲು ಸಂತೋಷವೆನಿಸುತ್ತದೆ. ಮಹಾತ್ಮಾ ಗಾಂಧಿ ಮತ್ತು ಲೆನಿನ್ ಅವರ ಜನ್ಮ ಶತಾಬ್ದಿ ವರ್ಷದಲ್ಲಿ ಅವರೀರ್ವರಿಗೂ ಅತ್ಯಂತ ಪ್ರಿಯವಾಗಿದ್ದ ವಿಷಯವನ್ನು ಕುರಿತು ಪ್ರಕಟವಾಗುತ್ತಿರುವ ಈ ಪುಟ್ಟ ಪುಸ್ತಕವನ್ನು ಓದುಗರು ಸ್ವಾಗತಿಸುವರೆಂದು ಆಶಿಸುತ್ತೇನೆ.

ಈ ಪುಸ್ತಕದ ಹಸ್ತಪ್ರತಿಯನ್ನೋದಿ ಸೂಕ್ತ ಸಲಹೆಗಳನ್ನಿತ್ತು ಉಪಕರಿಸಿದ ಡಾ, ಜಿ. ಎಸ್. ದೀಕ್ಷಿತ ಇವರಿಗೆ ನನ್ನ ಕೃತಜ್ಞತೆಗಳು.

ತಮ್ಮ ಉಪನ್ಯಾಸ ಮಾಲಿಕೆಯಲ್ಲಿ ಭಾಷಣ ಮಾಡಲು ನನಗೆ ಅವಕಾಶವಿತ್ತು, ಭಾಷಣವನ್ನು ಈಗ ಪುಸ್ತಕರೂಪದಲ್ಲಿ ಪ್ರಕಟಿಸುತ್ತಿರುವುದಕ್ಕಾಗಿ ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗದ ನಿರ್ದೇಶಕರಾದ ಶ್ರೀ ಚನ್ನವೀರ ಕಣವಿಯವರಿಗೂ ಈ ಪುಸ್ತಕವನ್ನು ಸಿದ್ಧಪಡಿಸುವಲ್ಲಿ ವಿಶೇಷ ಆಸಕ್ತಿ ವಹಿಸಿ ನನ್ನನ್ನು ಪ್ರೋತ್ಸಾಹಿಸಿದ ನನ್ನ ಗುರುಗಳಾದ ಶ್ರೀ ಎಲ್. ಎಮ್ ಗುಡ್ಡೀನ ಅವರಿಗೂ ನಾನು ಋಣಿಯಾಗಿದ್ದೇನೆ.

ಧಾರವಾಡ

೨೧-೨-೧೯೭೦ ಎಸ್. ಜಿ. ಘಟಪಣದಿ

ಪರಿವಿಡಿ

ಪ್ರಾಚೀನ ಭಾರತದಲ್ಲಿ ಶ್ರಮಜೀವಿಗಳು

೧ ಪ್ರಸ್ತಾವನೆ

ಅ. ಶ್ರಮಜೀವಿಗಳ ವರ್ಗ ಉದಯವಾದ ಬಗೆ:

ನಿತ್ಯ ನೂತನವಾಗುತ್ತ ಸಾಗಿರುವ ನಾಗರಿಕತೆ ಸುಖ-ಸಮೃದ್ಧಿಯ ಹಲವಾರು ಹೊಸಬಾಗಿಲುಗಳನ್ನು ತೆರೆಯುತ್ತಿರುವುದರ ಜೊತೆಗೇನೆ ಮಾನವ ಜೀವನವನ್ನು ಹೆಚ್ಚು ಹೆಚ್ಚಾಗಿ ಪರಾವಲಂಬಿಯನ್ನಾಗಿಯೂ ಸಂಕೀರ್ಣವನ್ನಾಗಿಯೂ ಮಾರ್ಪಡಿಸುತ್ತ ಸಾಗಿದೆ. ಶಿಲಾಯುಗ ಹಾಗೂ ಇತಿಹಾಸ ಪೂರ್ವ ಕಾಲದ ಜನರು ಆಹಾರ ನೀರುಗಳಿಗಾಗಿ ಅಲೆಯುತ್ತ ಬೇಟೆಯಾಡಿ ಉಪಜೀವನ ಸಾಗಿಸುತ್ತಿದ್ದರು. ಗವಿಗಳಲ್ಲಿಯೋ ಗಿಡದ ಹೊದರುಗಳಲ್ಲಿಯೋ ವಾಸವಾಗಿರುತ್ತಿದ್ದರು. ಹೀಗಾಗಿ ಸರಳತೆ ನಿರಾವಲಂಬನ ಅವರ ಜೀವನ ಪದ್ಧತಿಯ ವೈಶಿಷ್ಟ್ಯಗಳಾಗಿದ್ದವು. ಪ್ರಾಣ ರಕ್ಷಣೆ ಅವರ ಸಂಘಟಿತ ಜೀವನದ ಹಿಂದಿನ ಸೂತ್ರಧಾರ ಶಕ್ತಿಯಾಗಿದ್ದರೆ ಸಂಘಟನೆ ಒಕ್ಕಟ್ಟಿನ ಭಾವನೆಗೂ, ಒಕ್ಕಟ್ಟು ಸಾಮಾಜಿಕ ಸಮತಾ ಭಾವನೆಗೂ ಅವಕಾಶ ಮಾಡಿಕೊಟ್ಟ

ದ್ದವು. ಹೀಗಾಗಿ ಪಂಗಡರಹಿತ ಸರಳ ಸಮಾಜ ಪದ್ಧತಿ ಅವರ ದಾಗಿದ್ದಿತು. ಆದರೆ ಪ್ರಗತಿಪರ ನಾಗರಿಕತೆಯ ಕಲ್ಪನೆಯಿಂದಾಗಿ ಉದ್ಭವಿಸುವ ಅಮಿತಾಕಾಂಕ್ಷೆಗಳು ಸರಳತೆಯಿಂದ ಸಂಕೀರ್ಣ ತೆಯೆಡೆಗೆ ಸಮಾಜವನ್ನು ಪರಿವರ್ತಿಸುವ ದಿಶೆಯಲ್ಲಿ ಮಹತ್ವದ ಪಾತ್ರವನ್ನಾಡುತ್ತ ಬಂದಿವೆ. ಜೀವನದ ಮೂಲಭೂತ ಅವಶ್ಯ ಕತೆಗಳ ಪೂರೈಕೆಯೊಡನೆ ಮಾತ್ರ ತೃಪ್ತಿಪಟ್ಟು ನಿರಾವಲಂಬಿ ಜೀವನವನ್ನು ಸಾಗಿಸುತ್ತಿದ್ದ ಮಾನವನಲ್ಲಿ ಸುಖ ಸಂತೃಪ್ತಿ ವಿಲಾಸ ವೈಭವಗಳ ಭಾವನೆಗಳು ಬೆಳೆದು ಬಂದಂತೆಲ್ಲ ಪರಾ ವಲಂಬನ ಅನಿವಾರ್ಯವಾಗಿ ಪರಿಣಮಿಸುತ್ತ ಬಂದಿತು. ಆದರೆ ಈ ತೆರನ ಪರಿವರ್ತನೆಯ ಸಂದಿಗ್ಧ ಸಮಯದಲ್ಲಿ ಸಕಲರಿಗೂ ಹಾಗೂ ಏಕ ಕಾಲಕ್ಕೇನೆ ನಾಗರಿಕತೆಯ ಅಮೋಘ ಕೊಡುಗೆ ಗಳನ್ನು ಸ್ವೀಕರಿಸುವದು ಸಾಧ್ಯವಾಗದೇ ಹೋಗುತ್ತದೆ. ಕೆಲವೇ ಜನರು ತಮ್ಮ ಬುದ್ಧಿಮತ್ತೆ, ಚತುರತೆ, ಧೂರ್ತತನ, ಶ್ರೀಮಂತಿಕೆ, ಬಲ ಮುಂತಾದ ಅಸಾಧಾರಣ ನೈಸರ್ಗಿಕ ಕೊಡುಗೆಗಳ ಸಹಾ ಯದಿಂದ ತಮ್ಮ ಮೇಲಿನ ಮಹತ್ತರ ಹೊಣೆಗಾರಿಕೆಗಳನ್ನು ಅಸಹಾಯಕರಾದ ಜನತೆಯ ಮೇಲೆ ಹೊರಿಸಿ ಅತ್ಯಂತ ಪರಿಶ್ರ ಮಪೂರ್ಣ ಜೀವನ ಪದ್ಧತಿಯಿಂದ ಅತಿಸುಲಭವಾಗಿ ಪಾರಾಗುವ ಪ್ರಯತ್ನ ಮಾಡುತ್ತ ಬಂದಿದ್ದಾರೆ. ಇಂತಹ ಪ್ರಯತ್ನದಲ್ಲಿ ಯಶಸ್ವಿಯಾದವರು ಇತರರನ್ನು ಅತ್ಯಂತ ಕಠಿಣತಮವಾದ ದೈಹಿಕ ಕಾರ್ಯಗಳಲ್ಲಿ ತೊಡಗಿಸಿ ಅವರಲ್ಲಿನ ನ್ಯೂನತೆ ದೌರ್ಬ ಲ್ಯಗಳ ಪ್ರಯೋಜನ ಪಡೆದು ತಾವು ಮಾತ್ರ ಸುಖ ಸಂತೃಪ್ತಿಯ ಜೀವನವನ್ನು ಸಾಗಿಸಿಕೊಂಡು ಬಂದಿದ್ದಾರೆ. ಕಾಲಾನುಕ್ರಮದಲ್ಲಿ

ಧರ್ಮಶಾಸ್ತ್ರಗಳನ್ನು ಬರೆಯುವ ಅವಕಾಶ ವಿಶೇಷತಃ ಇಂತಹ ದೈಹಿಕಶ್ರಮ ವಿರಹಿತ ಜನತೆಗೆ ಒದಗಿದುದರಿಂದ ಅವರು ಅದರ ಪೂರ್ತಿ ಪ್ರಯೋಜನ ಪಡೆದು ಧಾರ್ಮಿಕರೂಪದಲ್ಲಿ ಸಾಮಾಜಿಕ ಕಟ್ಟುನಿಟ್ಟುಗಳ ಮೂಲಕ ನಾಗರಿಕತೆಯ ಕೊಡುಗೆಗಳು ವಂಶ ಪರಂಪರಾಗತವಾಗಿ ಕೆಲವೇ ಜನರ ಸ್ವತ್ತಾಗಿ ಉಳಿಯುವ ರೀತಿಯಲ್ಲಿ ಪ್ರಯತ್ನ ಮಾಡಿದರು ಮತ್ತು ಅದರಲ್ಲಿ ಯಶಸ್ವಿಯೂ ಆದರು.

ಗ್ರೀಕ ತತ್ವಜ್ಞಾನಿ ಅರಿಸ್ಟಾಟಲ್ ಹೇಳುವಂತೆ ಕೆಲವು ಜನರು ಜನ್ಮತಃ ಜಾಣರಾಗಿದ್ದು, ಅವರ ಜೀವನ ಸಂಕಲ್ಪ ಜಗತ್ತನ್ನಾಳುವುದಾಗಿರುತ್ತದೆ; ಜನ್ಮತಃ ನೈಸರ್ಗಿಕ, ವರದಾನ ಗಳಿಂದ ವಂಚಿತರಾದ ಇತರರು ಸೇವೆಯನ್ನು ಕೈಕೊಳ್ಳಬೇಕಾ ಗುತ್ತದೆ. ಇದು ನೈಸರ್ಗಿಕ ಸತ್ಯ. ಆದರೆ ಭಾರತದ ವಿಷಯ ದಲ್ಲಿ ನೈಸರ್ಗಿಕ ಬೆಳವಣಿಗೆಯಲ್ಲಿ ಮಾನವನ ಕೈವಾಡ ಸೇರಿ, ಸಮಾಜದಲ್ಲಿ ವಿಲಕ್ಷಣವಾನ ರೀತಿಯಲ್ಲಿ ಕಷ್ಟ ಸಹಿಷ್ಣುಗಳ ವರ್ಗ ಹಾಗೂ ಅವರ ಮೇಲೆ ಅವಲಂಬಿತವಾದ ಸುಖಜೀವಿ ಗಳ ವರ್ಗಗಳು ವಂಶಪರಂಪರೆಯ ತಳಹದಿಯ ಮೇಲೆ ರೂಪಿ ತವಾದವು.

ಈ ರೀತಿ ನಾಗರಿಕತೆಯ ಬೆಳವಣಿಗೆಯೊಂದಿಗೆ ಸಮಾ ಜದಲ್ಲಿ ಶ್ರಮಜೀವಿಗಳ ವರ್ಗ ಉದಯವಾದುದು ಒಂದು ಸಹಜ ಬೆಳವಣಿಗೆಯಾದರೆ, ಪ್ರಾಚೀನ ಜಗತ್ತಿನಲ್ಲಿ ತಲೆದೋ ರಿದ ಯುದ್ಧ ಸಂಘರ್ಷಗಳು ಈ ದಿಶೆಯಲ್ಲಿ ಅಷ್ಟೇ ಮಹತ್ವದ

ಪಾತ್ರವನ್ನಾಡುತ್ತ ಬಂದಿವೆ. ಪ್ರಾಚೀನಕಾಲದಲ್ಲಿ, 'ಯುದ್ಧ ಧರ್ಮ' ಕ್ಕನುಗುಣವಾಗಿ, ಯುದ್ಧದಲ್ಲಿ ವಿಜಯಶಾಲಿಯಾದವರು ಅಪಜಯ ಹೊಂದಿದವರನ್ನು ಸೆರೆ ಹಿಡಿದು ಅವರನ್ನು ತಮ್ಮ ಸೇವಕರನ್ನಾಗಿ ಮಾಡಿಕೊಳ್ಳುವದು ಎಲ್ಲ ದೇಶಗಳಲ್ಲಿಯೂ ರೂಢಿಯಲ್ಲಿದ್ದಿತು. ಆ ಪರಂಪರೆಗೆ ಅನುಗುಣವಾಗಿ, ಆರ್ಯರು ಭಾರತವನ್ನು ಪ್ರವೇಶಿಸಿ ಇಲ್ಲಿ ನೆಲೆಗೊಳ್ಳಲಣಿಯಾದಾಗ ಇಲ್ಲಿನ ಮೂಲ-ನಿವಾಸಿಗಳೊಡನೆ ನಡೆದ ಸಂಘರ್ಷಗಳಲ್ಲಿ ಅವರನ್ನು ಸೋಲಿಸಿ ತಮ್ಮ ದಾಸರನ್ನಾಗಿ ಮಾಡಿಕೊಂಡು ಕೀಳುದರ್ಜೆಯ ದೈಹಿಕ ಕಾರ್ಯಗಳಲ್ಲಿ ಅವರನ್ನು ತೊಡಗಿಸಿದರು. ವೈದಿಕ ಸಾಹಿತ್ಯದಲ್ಲೆಲ್ಲ ನಿರೂಪಿತರಾದ 'ದಸ್ಯು'ಗಳೇ ಈ ದಾಸರು. ಈ 'ದಸ್ಯು'ಗಳು ಅಥವಾ ದಾಸರೇ ಕಾಲಾನುಕ್ರಮದಲ್ಲಿ ಹಿಂದೂ ಸಮಾಜ ಪದ್ಧತಿಯಲ್ಲಿನ ನಾಲ್ಕನೆಯ ಪಂಗಡವಾದ ಶೂದ್ರ ಜಾತಿಗೆ ಸೇರಿಕೊಂಡರು. ಕ್ರಿ. ಶ ಪೂ. ೧೫೦೦ ಎಂದು ಭಾವಿಸಲ್ಪಟ್ಟಿರುವ ಋಗ್ವೇದದ ಕಾಲದಲ್ಲಿ ಕಲ್ಪನೆಯಲ್ಲಿಲ್ಲದ ಹಿಂದೂವರ್ಣಾಶ್ರಮ ಪದ್ಧತಿಯು ಕಾಲಾನುಕ್ರಮದಲ್ಲಿ ಹಿಂದೂ ಸಮಾಜದಲ್ಲಿ ಬೆಳೆದುಕೊಂಡು, ಉಳಿದುಕೊಂಡು ಬಂದುದು ಉಳಿದ ಮೂರು ವೇದಗಳ ಅಧ್ಯಯನದಿಂದ ವ್ಯಕ್ತವಾಗುತ್ತದೆ.

ಈ ರೀತಿ ಸಹಜಬೆಳವಣಿಗೆಯಲ್ಲಿ ಮಾನವನ ಕೈವಾಡವೂ ಸೇರಿ ಶ್ರಮಜೀವಿಗಳ ವರ್ಗ ಉದಯವಾಗಿ, ವಂಶಪರಂಪರಾಗತವಾಗಿ ಮುಂದುವರೆದುಕೊಂಡು ಬಂದಿದೆ.

೪. ಶ್ರಮಜೀವಿಗಳ ಕುರಿತು ಐತಿಹಾಸಿಕ ಆಧಾರಗಳು:

ಶ್ರಮ ಜೀವಿಗಳ ಕುರಿತು ಐತಿಹಾಸಿಕ ಆಧಾರಗಳಿಂದ ತಿಳಿದುಬರುವ ವಿಷಯ ತೀರ ಅಲ್ಪ ಮಾತ್ರ. ಅದುಕೂಡ ಶ್ರಮ ಜೀವಗಳ ಸಮಗ್ರ ಜೀವನ ಚಿತ್ರಣ ಕೊಡುವ ದಿಶೆಯಲ್ಲಿ ಹೆಚ್ಚಿಗೆ ಸಹಾಯಕವಾಗುವುದಿಲ್ಲ. ಹೀಗಾಗಿ ಪ್ರಾಚೀನ ಭಾರತದ ಸಾಹಿತ್ಯ ಕೃತಿಗಳಲ್ಲಿ ಮತ್ತು ವಿದೇಶೀ ಪ್ರವಾಸಿಗರ ವರ್ಣನೆಗಳಲ್ಲಿ ಸಿಕ್ಕುವ ಅಲ್ಪ ಸ್ವಲ್ಪ ಅಂಶಗಳಿಂದ ಅವರ ಜೀವನವನ್ನು ತಿಳಿದುಕೊಳ್ಳಬೇಕಾಗಿರುವುದರಿಂದ ಅದು ಪರಪೂರ್ಣವೆಂದೆನಿಸಲಾರದು.

ಇತಿಹಾಸಪೂರ್ವಕಾಲದ ಜನಜೀವನದ ಬಗೆಗೆ ಗ್ರಂಥಸ್ಥ ಆಧಾರಗಳೇನೂ ಸಿಕ್ಕುವದಿಲ್ಲವಾದರೂ ಆ ಕಾಲದಲ್ಲಿ ಜನಜೀವನ ಸರಳವೂ ನಿರಾವಲಂಬಿಯೂ ಆಗಿದ್ದಿತೆನ್ನುವುದರಲ್ಲಿ ಸಂಶಯವಿಲ್ಲ. ಆಗ ಎಲ್ಲರೂ ಕಷ್ಟ ಸಹಿಷ್ಣುಗಳೇ ಆಗಿದ್ದರು. ಹೀಗಾಗಿ ಸಮಾಜವಿನ್ನೂ ಆಗ ಶ್ರಮಜೀವಿಗಳು, ಸುಖಜೀವಿಗಳೆಂದು ಪಂಗಡಗಳಾಗಿ ವಿಂಗಡಿತವಾಗಿರಲಿಲ್ಲ. ಭಾರತದಲ್ಲಿ ಸಿಕ್ಕುವ ಅತೀ ಪ್ರಾಚೀನತಮ ಲಿಖಿತ ಆಧಾರಗಳೆಂದರೆ, ಸಿಂಧೂ ನದೀ ಸಂಸ್ಕೃತಿಯ ನಿವೇಶನಗಳಲ್ಲಿ ಸಿಕ್ಕಿರುವ ಮುದ್ರೆಗಳು. ಆದರೆ ಈ ಮುದ್ರೆಗಳ ಮೇಲಿನ ಲಿಪಿಯನ್ನು ಓದುವುದು ಇನ್ನೂ ಸಾಧ್ಯವಾಗದೇ ಉಳಿದಿರುವುದರಿಂದ ಅವು ಭಾರತದ ಪ್ರಾಚೀನತಮ ಜನಜೀವನದ ಮೇಲೆ ವಿಶೇಷ ಬೆಳಕು ಚೆಲ್ಲಲು ಅಸಮರ್ಥವಾಗಿವೆ. ಆದರೂ ಕುಂಬಾರ, ಕಮ್ಮಾರ, ಪತ್ತಾರ, ಬಡಿಗ ನೇಕಾರ, ಉಪ್ಪಾರ, ಕಲ್ಲುಒಡೆಯುವವರೇ

ಮುಂತಾದ ಶ್ರಮಜೀವಿಗಳು ಸಿಂಧೂ ಸಂಸ್ಕೃತಿ ಕಾಲದ ಸಮಾಜ ದಲ್ಲಿ ಇದ್ದರೆಂಬುದಕ್ಕೆ ಇತರ ಆಧಾರಗಳಿವೆ.

ಕೊಣ್ಣೂರು (ಬೆಳಗಾವಿ ಜಿಲ್ಲೆ), ಬಾದಾಮಿ, ಐಹೊಳೆ ಹನಗಂಡಿ. ಆಸಂಗಿ(ವಿಜಾಪುರ ಜಿಲ್ಲೆ) ಮುಂತಾದೆಡೆ ಕರ್ನಾಟಕದಲ್ಲಿಯೂ ಭಾರತದ ಹಲವಾರು ಕಡೆಗಳಲ್ಲಿಯೂ ಸಿಕ್ಕಿರುವ ದೊಡ್ಡ ದೊಡ್ಡ ಕಲ್ಲುಗಳಿಂದ ಸ್ಮಶಾನ ರಚನೆಗಳು (Megalithic Monuments) ತತ್ಕಾಲೀನ ಸಮಾಜ ದಲ್ಲಿ ಅವುಗಳಿಗಾಗಿಯೇ ನಿಯಮಿತವಾದ ಶ್ರಮಜೀವಿಗಳ ಗುಂಪಾಗಲಿ ಅಥವಾ ಅಂತಹ ಒಂದು ಸಂಸ್ಥೆಯಾಗಲಿ ಅಸ್ತಿತ್ವದಲ್ಲಿ ಇದ್ದಿರಬಹುದೆಂಬುದನ್ನು ನಿದರ್ಶಿಸುತ್ತವೆ.

ಐತಿಹಾಸಿಕ ಗ್ರಂಥಸ್ಥ ಆಧಾರಗಳಲ್ಲಿ ಚತುರ್ವೇದಗಳು, ಧರ್ಮಪುರಾಣಗಳು, ಧರ್ಮಶಾಸ್ತ್ರಗಳು, ಸ್ಮೃತಿಗಳು ಹಾಗೂ ಶಾಸ್ತ್ರಗಳ ಮೇಲಿನ ಟೀಕೆಗಳು, ಅರಣ್ಯಕಗಳು ಹಾಗೂ ರಾಮಾಯಣ ಮಹಾಭಾರತಗಳಂತಹ ರಾಷ್ಟ್ರೀಯ ಪುರಾಣಗಳು ಮಹತ್ವದವಾಗಿವೆ. ಈ ಗ್ರಂಥಗಳಿಂದ ಕ್ರಿ. ಶ. ಪೂ. ೧೫ ನೆಯ ಶತಮಾನದಿಂದ ಕ್ರಿ. ಶ. ಸುಮಾರು ೫ ನೆಯ ಶತಮಾನದ ವರೆಗಿನ ಜನಜೀವನದ ಬಗೆಗೆ ನಮಗೆ ವಿವರಗಳು ಸಿಕ್ಕುತ್ತವೆ. ಕ್ರಿ. ಶ. ಪೂ. ೭ ನೆಯ ಶತಮಾನದ ಸಂಸ್ಕೃತ ವ್ಯಾಕರಣ ಕಾರನಾದ ಪಾಣಿನಿ ಬರೆದ "ಅಷ್ಟಾಧ್ಯಾಯಿ" ಎಂಬ ಗ್ರಂಥ ದಿಂದಲೂ ಅದರ ಮೇಲೆ ಟೀಕಾತ್ಮಕವಾಗಿ ಪಾತಂಜಲಿ ಎಂಬಾತನು ಬರೆದಿರುವ 'ಮಹಾಭಾಷ್ಯ' ದಿಂದಲೂ ತತ್ಕಾ

ಲೀನ ಜನಜೀವನದ ವಿಷಯಕವಾಗಿ ವಿವರಗಳು ಸಿಕ್ಕುತ್ತವೆ. ಕ್ರಿ. ಶ. ಪೂ. ೪ನೆಯ ಶತಮಾನದವನೆಂದು ಹೇಳಬಹುದಾದ ಮೌರ್ಯ ಚಂದ್ರಗುಪ್ತನ ಮಂತ್ರಿಯಾಗಿದ್ದನೆಂದು ಖ್ಯಾತನಾಗಿರುವ ಕೌಟಿಲ್ಯನು ಬರೆದಿರುವ 'ಅರ್ಥಶಾಸ್ತ್ರ'ವೆಂಬ ರಾಜನೀತಿಗೆ ಸಂಬಂಧಿಸಿದ ಗ್ರಂಥದಿಂದಲೂ ಸ್ಮೃತಿಭಾಷ್ಯಗಳಿಂದಲೂ ಬುದ್ಧ ಜಾತಕ ಕಥೆಗಳಿಂದಲೂ ನಮಗೆ ಶ್ರಮಜೀವಿಗಳ ಕುರಿತು ವಿವರಗಳು ಲಭ್ಯವಾಗುತ್ತವೆ. ಅಲ್ಲದೆ ಮೌರ್ಯ ಚಂದ್ರಗುಪ್ತನ ಕಾಲಕ್ಕೆ ಭಾರತಕ್ಕೆ ಭೆಟ್ಟಿನೀಡಿದ ಗ್ರೀಸ್ ದೇಶದ ರಾಜದೂತನಾದ ಮೇಗಾಸ್ತಿನೀಸ್‌ನು ಬರೆದಿರುವ 'ಇಂಡಿಕಾ' ಎಂಬ ಗ್ರಂಥದಿಂದಲೂ ಅನೇಕ ವಿಷಯಗಳು ಬೆಳಕಿಗೆ ಬರುತ್ತವೆ. ನಾಡಿನ ತುಂಬ ಹರಡಿಕೊಂಡಿರುವ ಶಿಲಾಶಾಸನಗಳು ತಾಮ್ರಪಟಗಳು ಹಾಗೂ ಅಲ್ಲಲ್ಲಿ ಸಿಕ್ಕಿರುವ ಮುದ್ರೆಗಳು, ತತ್ಕಾಲೀನ ಶ್ರಮಜೀವಿಗಳ ಜೀವನದ ಮೇಲೆ ಬೆಳಕು ಚೆಲ್ಲುವ ನಂಬಲರ್ಹ ಆಧಾರಗಳಾಗಿವೆ.

೨ ಹಿನ್ನೆಲೆ

ಅ) ರಾಜಕೀಯ ಹಿನ್ನೆಲೆ: ಭಾರತದ ರಾಜಕೀಯ ಸ್ಥಿತಿಗತಿಗಳಲ್ಲಿ ಆಗಾಗ ತಲೆದೋರಿದ ಬದಲಾವಣೆಗಳು ನಾಡಿನ ಸಾಮಾಜಿಕ, ಆರ್ಥಿಕ ವ್ಯವಸ್ಥೆಯ ಮೇಲೆ ಗಹನವಾದ ಪರಿಣಾಮ ಬೀರದೇ ಇರುವ ವಿಷಯ ಗಮನಾರ್ಹವಾದುದಾಗಿದೆ. ಸಾಮ್ರಾಜ್ಯಗಳು ಕಣ್ಮರೆಯಾಗಿ ಹೊಸ ಸಾಮ್ರಾಜ್ಯಗಳು ಉದಯವಾದರೂ ಭಾರತದ ಮೇಲೆ ಆಗಾಗ್ಯೆ ವಿದೇಶಿಯರ ದಾಳಿಗಳಾಗುತ್ತಲೆ ಬಂದಿದ್ದರೂ ನಮ್ಮ ಸಾಮಾಜಿಕ ಹಾಗೂ ಆರ್ಥಿ ವ್ಯವಸ್ಥೆ ಕ್ರಾಂತಿಕಾರಕ ಪರಿವರ್ತನೆಗಳಿಗೊಳಗಾಗದೆ ಕಾಲಾನುಕ್ರಮದಲ್ಲಿ ತನ್ನದೇ ಆದರೀತಿಯಲ್ಲಿ ಉತ್ಕ್ರಾಂತಿಯನ್ನು ಹೊಂದುತ್ತ ಬಂದಿದೆ. ಆ ದೃಷ್ಟಿಯಿಂದ ರಾಜಕೀಯ ಚರಿತ್ರೆಗೆ ವಿಶೇಷ ಮಹತ್ವಕೊಡಬೇಕಾದ ಅಗತ್ಯವಿಲ್ಲವಾದರೂ ರಾಜಕೀಯ ಹಿನ್ನೆಲೆಯ ಪರಿಜ್ಞಾನವಿಲ್ಲದೆ ಸಾಂಸ್ಕೃತಿಕ ಅಧ್ಯಯನ ಪರಿಪೂರ್ಣವೆಂದೆನಿಸಲಾರದು. ರಾಜ, ಮಹಾರಾಜರುಗಳು ಮತ್ತು ಮಂತ್ರಿ ದಣ್ಣಾಯಕರು ನಾಡಿನ ಸಾಂಸ್ಕೃತಿಕ ಬೆಳವಣಿಗೆಯ ಹಿಂದಿನ ಸೂತ್ರಧಾರ ಶಕ್ತಿಗಳಂತಿದ್ದರು. ಅವರ ಕುರಿತಾದ ತಿಳಿವಳಿಕೆ ಸಾಮಾಜಿಕ, ಆರ್ಥಿಕ ಅಧ್ಯಯನಕ್ಕೆ ಪೂರಕವಾಗಿ ಪರಿಣಮಿಸುತ್ತದಲ್ಲದೆ ಅನವಶ್ಯಕವೆಂದೆನಿಸಲಾರದು.

ಕ್ರಿ. ಶ. ಪೂ. ೩೨೬ ರ ಸುಮಾರಿಗೆ ಅಲೆಕ್ಸಾಂಡರನು ಭಾರತದ ಮೇಲೆ ಅಭಿಯೋಗ ಮಾಡಿದಾಗ ನಂದ ವಂಶದ ಅರಸರು ಭಾರತದ ಬಹುಭಾಗದ ಮೇಲೆ ಪ್ರಭುತ್ವ ಸಂಪಾದಿಸಿ

ಕೊಂಡಿದ್ದರು. ಅಲೆಕ್ಝಾಂಡರನ ಅಭಿಯೋಗದಿಂದ ಭಾರತದ ರಾಜಕೀಯ ಇಲ್ಲವೆ ಸಾಂಸ್ಕೃತಿಕ ಚರಿತ್ರೆಯ ಮೇಲೆ ಗಹನವಾದ ಪರಿಣಾಮವಾಗದಿದ್ದರೂ ಅದು ಚಂದ್ರಗುಪ್ತನಿಗೆ ಕ್ರಿ. ಶ. ಪೂ. ೩೨೦ ರ ಸುಮಾರಿಗೆ ಮೌರ್ಯ ಸಾಮ್ರಾಜ್ಯ ಸ್ಥಾಪನೆಗೆ ಅವಕಾಶ ಕಲ್ಪಿಸಿಕೊಟ್ಟಿತು. ರಾಜರ್ಷಿಯೆಂದು ಖ್ಯಾತನಾದ ಅಶೋಕನ ಕಾಲದಲ್ಲಿ ಮೌರ್ಯ ಸಾಮ್ರಾಜ್ಯವು ಅತ್ಯಂತ ಊರ್ಜಿತ ಸ್ಥಿತಿಗೇರಿದ್ದಿತು. ಅವನ ತರುವಾಯ ಸಮರ್ಥರಾದ ಅರಸರಾರೂ ಮೌರ್ಯ ಸಾಮ್ರಾಜ್ಯದ ಗದ್ದುಗೆಯನ್ನೇರಲಿಲ್ಲ ವಾದುದರಿಂದ ಅದು ಬಹುಕಾಲ ಬಾಳಲಿಲ್ಲ. ಮೌರ್ಯ ಸಾಮ್ರಾಜ್ಯದ ಅವನತಿಯಿಂದ ಮೊದಲಾಗಿ ಗುಪ್ತ ಸಾಮ್ರಾಜ್ಯದ ಉದಯದ ವರೆಗಿನ ಕಾಲದಲ್ಲಿ ಉತ್ತರ ಭಾರತವು ವಿದೇಶೀಯರ ದಾಳಿಗೆ ತುತ್ತಾಗಿ ಅವರ ಆಳಿಕೆಗೆ ಒಳಪಟ್ಟಿದ್ದಿತು. ಆಗ ದಕ್ಷಿಣದಲ್ಲಿ ಶಾತವಾಹನರ ಪ್ರಭುತ್ವವಿದ್ದಿತು. ಕ್ರಿ. ಶ. ೩೨೦ ರಿಂದ ೪೭೦ ರ ವರೆಗೆ ಭಾರತವನ್ನು ಆಳಿದ ಗುಪ್ತರ ಕಾಲದಲ್ಲಿ ಭಾರತ ಇನ್ನೊಮ್ಮೆ ವೈಭವಪೂರ್ಣ ಆಡಳಿತದ ಅನುಭವ ಹೊಂದಿತು. ಒಬ್ಬರ ನಂತರ ಒಬ್ಬರು ಸಮರ್ಥರಾದ ಅರಸರ ಕೈಕೆಳಗೆ ಗುಪ್ತ ಸಾಮ್ರಾಜ್ಯ ವೈಭವದ ಶಿಖರಕ್ಕೇರುತ್ತ ಹೋಗಿ ಭಾರತದ ಇತಿಹಾಸದಲ್ಲಿಯೇ ಸುವರ್ಣಕಾಲವೆಂದು ಸುಪ್ರಸಿದ್ಧವಾಯಿತು. ಕ್ರಿ. ಶ. ೪೭೦ ರಲ್ಲಿ ಸ್ಕಂದಗುಪ್ತನ ಕಾಲದಲ್ಲಿ ಗುಪ್ತ ಸಾಮ್ರಾಜ್ಯವು ಹೂಣರ ದಾಳಿಯಿಂದಾಗಿ ದುರ್ಬಲಗೊಂಡು ಕಾಲಾನುಕ್ರಮದಲ್ಲಿ ಕಣ್ಮರೆಯಾಯಿತು. ಕ್ರಿ. ಶ. ೬೦೬ ರಲ್ಲಿ ಹರ್ಷವರ್ಧನನು ಉತ್ತರದಲ್ಲಿಯೂ

ಕ್ರಿ. ಶ. ೬೦೯ ರಲ್ಲಿ ಪರಮೇಶ್ವರ ಪುಲಕೇಶಿಯು ದಕ್ಷಿಣದಲ್ಲಿಯೂ ಪಟ್ಟವೇರಿ ಭಾರತದಲ್ಲಿ ರಾಜಕೀಯ ಸ್ಥಿರತೆಯನ್ನು ಪುನಸ್ಪ್ರತಿಷ್ಠಾಪಿಸಿದರು. ಹರ್ಷವರ್ಧನನ ತರುವಾಯ ಉತ್ತರ ಭಾರತವು ಒಂದರ ನಂತರ ಒಂದರಂತೆ ಮುಸಲ್ಮಾನರ ದಾಳಿಗಳಿಗೆ ತುತ್ತಾಗಿ ಭಾರತದ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯಕ್ಕಾರಂಭವಾಯಿತು. ಆದರೆ ದಕ್ಷಿಣ ಭಾರತದಲ್ಲಿ ಮಾತ್ರ, ಮುಸಲ್ಮಾನರ ದಾಳಿಗಳಾಗುವ ವರೆಗೆ ರಾಷ್ಟ್ರಕೂಟರು, ಚಾಳುಕ್ಯರು, ಹೊಯ್ಸಳರು, ಚೋಳರು ಅತ್ಯಂತ ಜನಪ್ರಿಯ ಅರಸೊತ್ತಿಗೆಗಳನ್ನು ಸ್ಥಾಪಿಸಿ ಆಳುತ್ತಿದ್ದರು.

ಆ. ಔದ್ಯಮಿಕ ಹಿನ್ನೆಲೆ

ಪ್ರಾಚೀನ ಕಾಲದಿಂದಲೂ ಭಾರತವು ಒಕ್ಕಲುತನ ಪ್ರಧಾನ ದೇಶವಾಗಿದೆ. ಸಿಂಧೂನದೀ ಸಂಸ್ಕೃತಿಯ ಕಾಲದಲ್ಲಿ ವ್ಯಾಪಾರಕ್ಕೆ ವಿಶೇಷ ಗಮನಕೊಡಲಾಗಿದ್ದಿತಾದರೂ ಒಕ್ಕಲತನವು ಆಗಲೂ ಮಹತ್ವದ ಉದ್ಯಮವಾಗಿದ್ದಿತು. ಒಕ್ಕಲತನಕ್ಕೆ ಸಹಾಯಕವಾಗಿ ಅನೇಕ ಉದ್ಯಮಗಳು ಪ್ರಾಚೀನ ಕಾಲದಿಂದಲೂ ಬೆಳೆದುಕೊಂಡು ಬಂದಿವೆ. ಬಡಿಗ, ಕಮ್ಮಾರ, ಚರ್ಮಕಾರ ಮುಂತಾದವರು ಒಕ್ಕಲತನದ ಅಗತ್ಯದ ವಸ್ತುಗಳನ್ನು ನಿರ್ಮಿಸಿ ಕೊಡುವದರ ಜೊತೆಗೆ ಜನತೆಯ ದೈನಂದಿನ ಜೀವನದ ಅಗತ್ಯದ ವಸ್ತುಗಳನ್ನು ಪೂರೈಸುತ್ತ ಬಂದಿದ್ದಾರೆ. ಅಲ್ಲದೆ ಕುಂಬಾರ, ನೇಕಾರ, ಪತ್ತಾರ, ಕಲ್ಲುಕಟಿಗ, ಉಪ್ಪಾರ ಸಿಂಪಿಗ ಮುಂತಾದವರೂ ಒಕ್ಕಲಿಗರ ದೈನಂದಿನ ಜೀವನದ

ವಸ್ತುಗಳನ್ನು ನಿರ್ಮಿಸುವಲ್ಲಿ ನಿರತರಾಗಿದ್ದರು. ಬೆಳ್ಳಿ, ಬಂಗಾರ, ತಾಮ್ರ, ಹಿತ್ತಾಳಿ, ಕಬ್ಬಿಣ ಮುಂತಾದ ಲೋಹಗಳು ಭಾರತೀಯರಿಗೆ ವೇದ ಕಾಲದಿಂದಲೂ ಪರಿಚಿತವಾದವುಗಳಾಗಿವೆ. ಈ ಎಲ್ಲ ಲೋಹಗಳನ್ನು ಅದರಿನ ರೂಪದಲ್ಲಿ ಭೂಮಿಯಿಂದ ಅಗಿದು ತೆಗೆದು ಅವುಗಳಿಗೆ ಶುದ್ಧಲೋಹದ ರೂಪ ಕೊಡುವ ವರೆಗಿನ ಶ್ರಮಸಾಧ್ಯವಾದ ಎಲ್ಲ ಕಾರ್ಯಗಳೂ ಪ್ರಾಚೀನ ಭಾರತೀಯರಿಗೆ ಗೊತ್ತಿದ್ದವು. ಋಗ್ವೇದದಷ್ಟು ಪೂರ್ವಕಾಲ ದಲ್ಲಿಯೇ ಉದಯಿಸಿದ ಈ ಶ್ರಮಿಕವರ್ಗಗಳು ಕಾಲಾನು ಕ್ರಮದಲ್ಲಿ ಸಮಾಜದ ಅನಿವಾರ್ಯ ಘಟಕಗಳಾಗಿ ಪರಿಣಮಿಸಿ ಭಾರತದ ಗ್ರಾಮೀಣ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬಾಗಿ ಬೆಳೆದುಕೊಂಡು ಬಂದಿವೆ.

೩ ಶ್ರಮಜೀವಿಗಳ ವರ್ಗ ವಿಶ್ಲೇಷಣೆ

ಅಭ್ಯಾಸದ ಅನುಕೂಲತೆಯ ದ್ರಷ್ಟಿಯಿಂದಲೂ ಪ್ರಾಚೀನ ಭಾರತದಲ್ಲಿ ಪ್ರಚಾರದಲ್ಲಿದ್ದ ಶ್ರಮಜೀವಿಗಳ ವಿವಿಧ ಪ್ರಕಾರಗಳನ್ನು ಅರಿತುಕೊಳ್ಳುವ ದೃಷ್ಟಿಯಿಂದಲೂ ಶ್ರಮಜೀವಿಗಳ ವರ್ಗಗಳ ಕಲ್ಪನೆ ನಮಗಿರಬೇಕಾದುದು ಅಗತ್ಯ. ತಮ್ಮ ಉಪಜೀವನಕ್ಕಾಗಿ ವಿಶೇಷತಃ ತಮ್ಮ ಶರೀರ ಶ್ರಮದ ಮೇಲೆ ಮಾತ್ರ ಅವಲಂಬಿತರಾದ ಜನರನ್ನು ಶ್ರಮಜೀವಿಗಳೆಂದು ಕರೆಯಬಹುದು. ವೈದಿಕ ಸಾಹಿತ್ಯದಲ್ಲೆಲ್ಲ ಈ ವಿಧದ ಶ್ರಮಜೀವಿಗಳನ್ನು 'ದಶ್ಯ, ಅಥವಾ ದಾಸ ಮತ್ತು ಶೂದ್ರ ಎಂದು ಕರೆಯಲಾಗಿದೆ. ವೇದೋತ್ತರ ಸಂಸ್ಕೃತ ಸಾಹಿತ್ಯದಲ್ಲಿ ಸಾಮಾನ್ಯವಾಗಿ ಶ್ರಮಜೀವಿಗಳನ್ನು ಕರ್ಮಕಾರ ಎಂದು ಕರೆಯಲಾಗಿದೆ. 'ಉಪಜೀವನಾರ್ಥಕವಾಗಿ ಶ್ರಮವಹಿಸು' ಎಂದು ಅರ್ಥಕೊಡುವ ಭೃ ಎಂಬ ಸಂಸ್ಕೃತ ಕ್ರಿಯಾಧಾತುವಿನಿಂದ ವ್ಯುತ್ಪತ್ತಿಯಾದ ಭೃತ್ಯ ಹಾಗೂ ಭೃತಕ ಎಂಬ ಶಬ್ದಗಳೂ ಸೇವಕ ಅಥವಾ ಕಷ್ಟಜೀವಿ ಎಂಬ ಅರ್ಥಕೊಡುತ್ತವೆ.

ಪ್ರಾಚೀನ ಕಾಲದಲ್ಲಿ ಸಮಾಜದಲ್ಲಿ ಸಾಮಾನ್ಯವಾಗಿ ಗುಲಾಮರು ಅಥವಾ ಸೇವಕರು, ಕೂಲಿಕಾರರು, ಕುಶಲ ಕರ್ಮಿಗಳು, ವೇತನ ರಹಿತ ದುಡಿಮೆಯಲ್ಲಿ ತೊಡಗಿದವರು, ಶ್ರಮಸಾಧ್ಯವಾದ ಕಾರ್ಯದಲ್ಲಿ ತೊಡಗಿ ತಮ್ಮ ಉಪಜೀವನ ಸಾಗಿಸುವವರಾಗಿದ್ದರು.

೧) 'ಶಿಲ್ಪಿ, ಹಾಗೂ 'ಕರ್ಮಕಾರ'- ಮನೆತನದ ಪರಂಪರಾಗತ ಉದ್ಯೋಗದ ಮೇಲೆ ಅವಲಂಬಿತರಾದ ಶ್ರಮ ಜೀವಿಗಳಲ್ಲಿ ಕುಶಲ ಕರ್ಮಿಗಳೆಂದೂ ಕೇವಲ ಶ್ರಮಜೀವಿಗ ಳೆಂದೂ ಎರಡು ಪ್ರಭೇದಗಳಿದ್ದವು. ಪಾಣಿನಿಯು ಕುಶಲ ಕರ್ಮಿಗಳನ್ನು 'ಶಿಲ್ಪಿ' ಗಳೆಂದೂ, ಕೇವಲ ಶ್ರಮ ಜೀವಿಗಳನ್ನು 'ಕರ್ಮಕಾರ' ಎಂದೂ ಕರೆದಿದ್ದಾನೆ. ಸುವರ್ಣ ಕಾರರು, ನೇಕಾರರು, ವಾಸ್ತು ಹಾಗೂ ಮೂರ್ತಿಶಿಲ್ಪಿಕಾರರೇ ಮುಂತಾದವರ ಉದ್ಯೋಗಗಳು ಕಲಾತ್ಮಕವಾದವುಗಳಾದುದ ರಿಂದ ಅವರಿಗೆ ಶಿಲ್ಪಿಗಳೆಂದು ಕರೆಯುವದು ವಾಡಿಕೆಯಾಗಿದ್ದಿತು. ಕಮ್ಮಾರರು, ಕೂಲಿಕಾರರು, ಕಲ್ಲುಕುಟಿಗರು ಮುಂತಾದವರ ಕಾರ್ಯ ಕೇವಲ ಪರಿಶ್ರಮಪೂರ್ಣವಾದುದಾಗಿದ್ದುದರಿಂದ ಅವರಿಗೆ ಕರ್ಮಕಾರ ಎಂದು ಕರೆಯುತ್ತಿದ್ದರು. 'ಕರ್ಮಕಾರ' ಎಂಬ ಸಂಸ್ಕೃತ ಶಬ್ದದಿಂದಲೇ ಮುಂದೆ 'ಕಮ್ಮಾರ' ಎಂಬ ಶಬ್ದ ರೂಢಿಯಾದುದು ಗಮನಾರ್ಹ. ಪಾಣಿನಿಯು ಕುಶಲ ಕರ್ಮಿಗಳ ಕೂಲಿಯನ್ನು 'ವೇತನ' ವೆಂದೂ ಕರ್ಮಕಾರರ ಕೂಲಿಯನ್ನು ಭೃತಿ ಎಂದೂ ಕರೆದಿದ್ದಾನೆ.

೨) ರಾಜಶಿಲ್ಪಿ ಹಾಗೂ ಗ್ರಾಮಶಿಲ್ಪಿ- ಪಾಣಿನಿಯ ಕಾಲದಲ್ಲೂ ಅನಂತರವೂ ಸಾಮಾನ್ಯ ಜನರ ಕಾರ್ಯಗಳನ್ನು ಮಾಡಿಕೊಡುವ ಶ್ರಮಜೀವಿಗಳಿಗೂ, ರಾಜಕಾರ್ಯಕ್ಕೆ ಮಾತ್ರ ನಿಯಮಿತರಾದವರಿಗೂ ಗಣನೀಯ ವ್ಯತ್ಯಾಸವಿದ್ದಂತೆ ತೋರುತ್ತದೆ. ಸಾಮಾನ್ಯ ಜನರ ಕಾರ್ಯಗಳನ್ನು ಮಾಡಿ ಕೊಡುವವರಿಗೆ 'ಗ್ರಾಮಶಿಲ್ಪಿ' ಗಳೆಂದೂ, ರಾಜಕಾರ್ಯದಲ್ಲಿ

ತೊಡಗಿದವರನ್ನು 'ರಾಜಶಿಲ್ಪಿ' ಗಳೆಂದೂ ಪಾಣಿನಿಯು ಕರೆದಿದ್ದಾನೆ. 'ರಾಜನಾಪಿತ' ಎನ್ನುವವನು ಅರಸ ಹಾಗೂ ಆತನ ಪರಿವಾರದವರ ಕ್ಷೌರ ಮಾಡಲು ನಿಯಮಿತನಾದವನು. ರಾಜಶಿಲ್ಪಿಗಳು ಸಾಮಾನ್ಯ ಜನತೆಯ ಕಾರ್ಯ ಮಾಡಿಕೊಡುವುದೆಂದರೆ ತಮ್ಮ ಘನತೆಗೆ ಕುಂದು ಎಂದು ಬಗೆಯುತ್ತಿದ್ದರು. ಉಳಿದವರಿಗಿಂತಲೂ ಅವರ ಸಂಪಾದನೆ ಹೆಚ್ಚಿಗಿದ್ದಿತಾದುದರಿಂದ ಸಮಾಜದಲ್ಲಿ ಉಳಿದವರಿಗಿಂತಲೂ ಹೆಚ್ಚಿನ ಮಾನ ಮರ್ಯಾದೆಗಳು ರಾಜಶಿಲ್ಪಿಗಳಿಗೆ ಸಲ್ಲುತ್ತಿದ್ದವು.

ಪ್ರಾಚೀನ ಕಾಲದ ಶ್ರಮಜೀವಿಗಳಲ್ಲಿ ಇನ್ನೊಂದು ಪ್ರಭೇದವಿದ್ದಿತು. ತಮ್ಮ ಮನೆಗಳಲ್ಲಿಯೇ ತಮ್ಮ ಶಾಲೆಯನ್ನು ಸ್ಥಾಪಿಸಿಕೊಂಡು ಜನರ ಕಾರ್ಯಗಳನ್ನು ಪೂರೈಸಿಕೊಡುತ್ತಿದ್ದ ಶ್ರಮಜೀವಿಗಳದು ಒಂದು ವಿಧವಾದರೆ, ಮನೆ ಮನೆಗೆ ಅಲೆದು ಜನರ ಕಾರ್ಯಗಳನ್ನು ಮಾಡಿಕೊಡುವ ಶ್ರಮಜೀವಿಗಳದು ಇನ್ನೊಂದು ವಿಧ. ತಮ್ಮ ಮನೆಯಲ್ಲಿಯೆ ಕುಳಿತು ಕೆಲಸ ಮಾಡಿಕೊಡುವವರ ಉತ್ಪನ್ನ ಉಳಿದವರಿಗಿಂತಲೂ ಹೆಚ್ಚಾಗಿದ್ದಿತಲ್ಲದೆ ಸಮಾಜದಲ್ಲಿ ಅವರ ಸ್ಥಾನವೂ ಉನ್ನತವಾಗಿದ್ದಿತು.

ಒಂದೊಂದು ಉದ್ಯೋಗದಲ್ಲಿ ನಿರತರಾದವರಿಗೆ ಒಂದೊಂದು ವಿಶಿಷ್ಟ ಹೆಸರಿನಿಂದ ಕರೆಯುವ ರೂಢಿ ಋಗ್ವೇದ ಕಾಲದಷ್ಟು ಹಿಂದೆಯೇ ಇದ್ದಿತು. ಕ್ಷೌರಿಕ, ಬಡಿಗ, ರಥ ನಿರ್ಮಾಪಕ, ಕಮ್ಮಾರ, ಚಮ್ಮಾರ ಮುಂತಾದ ದಿನನಿತ್ಯದ ಆವಶ್ಯಕತೆಗಳನ್ನು ಪೂರೈಸಿಕೊಡುವ ಕೆಲಸಗಾರರು ಋಗ್ವೇದ

ಕಾಲದಷ್ಟು ಹಿಂದೆಯೇ ಭಾರತದಲ್ಲಿ ಇದ್ದರೆಂಬುದಕ್ಕೆ ಋಗ್ವೇದ ಸಂಹಿತೆಯಲ್ಲಿ ಅವರನ್ನು ಕುರಿತಾದ ಉಲ್ಲೇಖಗಳೇ ಸಾಕ್ಷಿ. ಶ್ರಮಜೀವಿಗಳ ಇನ್ನುಳಿದ ವರ್ಗಗಳ ವಿಷಯಕವಾಗಿಯೂ ಪ್ರಾಚೀನ ಸಂಸ್ಕೃತ ಸಾಹಿತ್ಯದಿಂದ ಅನೇಕ ವಿವರಗಳು ಲಭ್ಯವಾಗುತ್ತವೆ.

ಆಗ ಮಣ್ಣಿನ ಪಾತ್ರೆಗಳನ್ನು ಮಾಡುವವರನ್ನು ಕುಂಬಕಾರ, ಹಾಗೂ 'ಕುಲಾಲ, ಎಂದು ಎರಡು ವಿಧವಾಗಿ ಕರೆಯಲಾಗುತ್ತಿದ್ದಿತು. ಕುಂಬಕಾರ ಶಬ್ದದಿಂದಲೇ ಕನ್ನಡ ಕುಂಬಾರ ಎಂಬ ಶಬ್ದ ಹುಟ್ಟಿದೆ. ಗಾಣಿಗರನ್ನು ಪ್ರಾಚೀನ ಕಾಲ ದಲ್ಲಿ 'ತೈಲಿಕ ಅಥವಾ ಚಕ್ರಿ, ಎಂದು ಕರೆಯಲಾಗುತ್ತಿದ್ದಿತು. ಚರ್ಮದ ಕೆಲಸದಲ್ಲಿ ತೊಡಗಿದವರು ಚರ್ಮಕಾರ ಎಂದು ಕರೆಯ ಲ್ಪಡುತ್ತಿದ್ದರು. ಚರ್ಮಕಾರ ಶಬ್ದದಿಂದಲೇ ಕನ್ನಡ ಸಮಗಾರ ಶಬ್ದೋತ್ಪತ್ತಿಯಾಗಿದೆ. ಚರ್ಮಕಾರರದು ಏಳು ಅಂತ್ಯಜ ಜಾತಿಗಳಲ್ಲಿ ಒಂದಾಗಿದ್ದಿತು. ಬಟ್ಟೆಗಳನ್ನು ತೊಳೆದು ಉಪಜೀವನ ಸಾಗಿಸುತ್ತಿದ್ದವರನ್ನು ರಜಕ ಎಂದು ಕರೆಯುತ್ತಿದ್ದರು. ಕಟ್ಟಿಗೆಯ ಕೆಲಸದಲ್ಲಿ ತೊಡಗಿದವರನ್ನು ತಕ್ಷಕ ಎಂದು ಕರೆ ಯುವುದು ರೂಢಿ. ಈ ರೀತಿಯಾಗಿ ನೇಕಾರರನ್ನು ತಂತುವಾಯ ಅಥವಾ ಕುವಿಂದ ಎಂದೂ, ಶಿಂಪಿಗರನ್ನು ತುನ್ನವಾಯ ಎಂದೂ, ಅಂಬಿಗರನ್ನು ದಾಶ, ಕೈವರ್ತ ಅಥವಾ ಧೀವರ ಎಂದೂ, ಕ್ಷೌರಿಕರನ್ನು ನಾಪಿತ ಎಂದೂ, ಮೇದಾರರನ್ನು ಬುರುಡ ಎಂದೂ ಕರೆಯಲಾಗುತ್ತಿದ್ದಿತು. ಶೈಲೂಷ ಅಥವಾ ನಟ ಎಂಬವರು ರಂಗಭೂಮಿಯ ಮೇಲೆ ಅಭಿನಯಿಸಿ ತಮ್ಮ

ಉಪಜೀವನ ಸಾಗಿಸುತ್ತಿದ್ದರು. ಪುಲ್ಕಸ ಅಥವಾ ಪೌಲ್ಕಸ ಎಂಬವರು ಶಿರೆ ಮುಂತಾದ ಮದವೇರುವ ರಸಾಯನಗಳ ತಯಾರಿಕೆ ಹಾಗೂ ಮಾರಾಟಗಳಿಂದ ಹೊಟ್ಟೆ ಹೊರೆಯುತ್ತಿದ್ದರು. ಕಾಜಿನ ಮುತ್ತು ಹವಳಗಳನ್ನು ತಯಾರಿಸಿ ಉಪಜೀವನ ಸಾಗಿಸುತ್ತಿದ್ದ ಮಣಿಕಾರರ ವರ್ಗವೂ ಅಷ್ಟೇ ಪ್ರಾಚೀನವಾಗಿದೆ. ಅಲ್ಲದೆ ರಜಕ ಎಂಬವರ ಹಾಗೂ ಸುವರ್ಣಕಾರರ ವಿಷಯಕವಾಗಿಯೂ ಪ್ರಾಚೀನ ಸಾಹಿತ್ಯದಲ್ಲಿ ಉಲ್ಲೇಖಗಳು ಸಿಕ್ಕುತ್ತವೆ. ಆಧುನಿಕ ಹಿಂದು ಸಮಾಜದಲ್ಲಿ ಒಳಗೊಂಡಿರುವ ಮಹತ್ವದ ಈ ಶ್ರಮಜೀವಿಗಳ ವರ್ಗಗಳು ವೇದಕಾಲದಷ್ಟು ಪೂರ್ವದಲ್ಲಿಯೇ ಹುಟ್ಟಿ ಬೆಳೆದುಕೊಂಡು ಬಂದಿವೆ. ಅನಂತರ ಕಾಲದಲ್ಲಿ ಹಿಂದೂ ಧರ್ಮದಲ್ಲಿ ರೂಪುಗೊಂಡ ಹಲವಾರು ಜಾತಿ, ಉಪಜಾತಿಗಳಿಗೆ ವಂಶಪರಂಪರಾಗತವಾಗಿ ಬೆಳೆದುಕೊಂಡು ಬಂದ ಈ ಉದ್ಯೋಗಗಳೇ ಮೂಲ ಎಂಬುದು ಈ ಸಂದರ್ಭದಲ್ಲಿ ಗಮನಿಸತಕ್ಕ ಮಹತ್ವದ ಅಂಶವಾಗಿದೆ. ಈ ರೀತಿಯಾಗಿ ಆಧುನಿಕ ಹಿಂದೂ ಸಮಾಜ ರಚನೆಯ ತಳಹದಿ ಹಾಕಲ್ಪಟ್ಟದ್ದು ವೇದಕಾಲದಷ್ಟು ಮುಂಚೆ ಎಂಬುದು ಮಹತ್ವದ ವಿಷಯವಾಗಿದೆ.

೪. ಗುಲಾಮ ಪದ್ಧತಿ

ಪ್ರಾಚೀನ ಭಾರತದಲ್ಲಿ ಗುಲಾಮ ಪದ್ಧತಿ ಅಸ್ತಿತ್ವದಲ್ಲಿ ಇದ್ದಿತೆ; ಇಲ್ಲವೇ ಎಂಬ ಕುರಿತು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಮೌರ್ಯ ಚಂದ್ರಗುಪ್ತನ ಕಾಲಕ್ಕೆ ಭಾರತಕ್ಕೆ ರಾಯಭಾರಿಯಾಗಿ ಆಗಮಿಸಿದ್ದ ಗ್ರೀಕ ವಿದ್ವಾಂಸ ಮೆಗಾಸ್ತನೀಸನು ಈ ವಿಷಯದಲ್ಲಿ ಅತ್ಯಂತ ಮಹತ್ವದ ಹೇಳಿಕೆಯನ್ನಿತ್ತು ವಾದವಿವಾದಕ್ಕೆಡೆಮಾಡಿಕೊಟ್ಟಿದ್ದಾನೆ. "ಸಕಲ ಭಾರತೀಯರೂ ಸ್ವತಂತ್ರರಿದ್ದಾರೆ; ಅವರಲ್ಲಿ ಒಬ್ಬನೂ ಗುಲಾಮನಾಗಿಲ್ಲ," ಎಂಬ ಅವನ ಹೇಳಿಕೆ ನಿಜವಾಗಿಯೂ ವಿವಾದಾಸ್ಪದವಾದುದಾಗಿದೆ. ಅವನ ಸಮಕಾಲೀನನಾದ ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಸೇವಕ ಮತ್ತು ಮಾಲಿಕರ ನಡುವಿನ ಸಂಬಂಧವನ್ನು ಕುರಿತು ವಿಧಿಸಿರುವ ನಿಬಂಧನೆಗಳಿಂದ ಮೌರ್ಯಕಾಲೀನ ಭಾರತದಲ್ಲಿ ಗುಲಾಮ ಪದ್ಧತಿ ಇದ್ದಿತೆಂಬುದು ವ್ಯಕ್ತವಾಗುತ್ತದೆ. ವೈದಿಕ ಸಾಹಿತ್ಯದಲ್ಲಿ ಉಲ್ಲೇಖ ಹೊಂದಿರುವ ಶೂದ್ರ, ದಾಸ ಅಥವಾ ದಸ್ಯುಗಳ ಸ್ಥಿತಿಗತಿಗಳ ಅಧ್ಯಯನದಿಂದ ಭಾರತದಲ್ಲಿ ಋಗ್ವೇದ ಕಾಲದಿಂದಲೇ ಗುಲಾಮ ಪದ್ಧತಿ ಬೆಳೆದುಕೊಂಡು ಬಂದಿರುವಂತೆ ತೋರುತ್ತದೆ. ಬಹುತರವಾಗಿ ಪ್ರಾಚೀನ ಕಾಲದಲ್ಲಿ ಪಾಶ್ಚಿಮಾತ್ಯ ದೇಶಗಳಲ್ಲಿ ರೂಢಿಯಲ್ಲಿದ್ದ ದೊಡ್ಡ ಪ್ರಮಾಣದ ಗುಲಾಮರ ವ್ಯಾಪಾರವು ಭಾರತದಲ್ಲಿ ನಡೆಯುತ್ತಿರಲಿಲ್ಲವೆಂಬ ಕಾರಣಕ್ಕಾಗಿಯೂ, ವಿದೇಶಿ

ಯನಾದ ಮೇಗಾಸ್ತನೀಸನಿಗೆ ಭಾರತದ ಸಮಾಜವ್ಯವಸ್ಥೆಯ ಸ್ಪಷ್ಟ ಕಲ್ಪನೆ ಇಲ್ಲದ ಕಾರಣಕ್ಕಾಗಿಯೂ ಆತನು ಪ್ರಾಚೀನ ಭಾರತದಲ್ಲಿ ಗುಲಾಮ ಪದ್ಧತಿ ರೂಢಿಯಲ್ಲಿರಲಿಲ್ಲವೆಂದು ಅಭಿಪ್ರಾಯ ಪಟ್ಟಿರುವಂತೆ ತೋರುತ್ತದೆ.

ವಾಯವ್ಯ ದಿಕ್ಕಿನಿಂದ ಭಾರತವನ್ನು ಪ್ರವೇಶಿಸಿ, ಆರ್ಯರು ಇಲ್ಲಿಯೇ ನೆಲೆನಿಲ್ಲಲೆತ್ನಿಸಿದಾಗ ಅವರ ಮಾರ್ಗ ಸುಗಮವಾಗಿರಲಿಲ್ಲ. ಅವರು ಇಲ್ಲಿಯ ಮೂಲನಿವಾಸಿಗಳೊಂದಿಗೆ ಯುದ್ಧ ಮಾಡಬೇಕಾಯಿತು. ಪ್ರಾಚೀನ ಕಾಲದ ಯುದ್ಧಧರ್ಮಕ್ಕನುಗುಣವಾಗಿ ಯುದ್ಧದಲ್ಲಿ ವಿಜಯಶಾಲಿಗಳಾದ ಆರ್ಯರು ಇಲ್ಲಿನ ಮೂಲನಿವಾಸಿಗಳನ್ನು ಸೆರೆಹಿಡಿದು ತಮ್ಮ ಗುಲಾಮರನ್ನಾಗಿಸಿಕೊಂಡರು. 'ದಸ್ಯು' ಅಥವಾ 'ದಾಸ' ಎಂದು ಉಕ್ತರಾಗಿರುವವರು ಅನಾರ್ಯರೆಂಬುದೂ ಯುದ್ಧಾನಂತರ ಅವರು ಆರ್ಯರ ಒಡೆತನಕ್ಕೊಳಗಾದ ಗುಲಾಮರೆಂಬುದೂ ಋಗ್ವೇದದಿಂದ ತಿಳಿದುಬರುತ್ತದೆ. ವೇದೋತ್ತರ ಸಾಹಿತ್ಯದಿಂದಲೂ ಈ ದಾಸರು ಅನಾರ್ಯರೆಂದೇ ತಿಳಿದುಬರುತ್ತದೆ. "ಸಾರ್ವತ್ರಿಕ ಹತ್ಯಾಕಾಂಡದಿಂದ ಪಾರಾಗಿ ಉಳಿದ ಮೂಲನಿವಾಸಿಗಳನ್ನು ಆರ್ಯರು ತಮ್ಮ ವೈಯಕ್ತಿಕ ಗುಲಾಮರನ್ನಾಗಿ ಮಾಡಿಕೊಂಡಿರುವಂತೆ ತೋರುತ್ತದೆ" ಎಂದು ಕೀಥ್ ಮತ್ತು ಮೆಕ್ಡೊನೆಲ್ ಎಂಬ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಬಹುತರವಾಗಿ ಪ್ರಾಚೀನ ಭಾರತದಲ್ಲಿ ರೂಢಿಯಲ್ಲಿದ್ದ ಏಳು ವಿಧವಾದ ಗುಲಾಮರನ್ನು ಮನು ಹೆಸರಿಸುತ್ತಾನೆ; ೧) ಯುದ್ಧದಲ್ಲಿ ಸೆರೆಸಿಕ್ಕವರು ೨) ಉಪಜೀವನಕ್ಕಾಗಿ ಆಶ್ರಿತ

ರಾದವರು ೩) ಸ್ತ್ರೀ ಗುಲಾಮರ ಮಕ್ಕಳು ೪) ಕೊಂಡು ಕೊಂಡವರು ೫) ಕಾಣಿಕೆಯ ರೂಪದಲ್ಲಿ ಬಂದವರು ೬) ವಂಶಪರಂಪರಾಗತವಾಗಿ ಗುಲಾಮರಾಗಿ ಉಳಿದವರು ಮತ್ತು ೭) ಅಪರಾಧಕ್ಕಾಗಿ ಗುಲಾಮರಾಗಿ ಪರಿವರ್ತಿಸಲ್ಪಟ್ಟವರು. ಅದಕ್ಕೆ ಪ್ರತಿಯಾಗಿ ನಾರದರು ಗುಲಾಮರಲ್ಲಿ ಹದಿನೈದು ವಿಧವೆಂದು ಹೇಳುತ್ತಾರೆ.

ಋಗ್ವೇದದ ಪುರುಷಸೂಕ್ತದಲ್ಲಿ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರು ಕ್ರಮವಾಗಿ ವಿಶ್ವಪುರುಷನ ಮುಖ, ತೋಳು, ತೊಡೆ ಹಾಗೂ ಪಾದಗಳಿಂದ ಜನಿಸಿದರೆಂದು ಉಕ್ತವಾಗಿರುವ ರೀತಿಯಿಂದ ಆಗ ಸಮಾಜದಲ್ಲಿ ಶೂದ್ರರಿಗಿದ್ದ ಸ್ಥಾನದ ಕಲ್ಪನೆಯಾಗುತ್ತದೆ. **अन्यस्य प्रेष्य** ಅಂದರೆ ಶೂದ್ರನು "ಬೇರೊಬ್ಬನ ಸೇವಕ" ನೆಂದೂ, **कामोत्थाय** ಅಂದರೆ "ಬೇಕಾದಾಗ ಬಹಿಷ್ಕಾರಯೋಗ್ಯ" ನೆಂದೂ ಮತ್ತು **यथाकामवध्यः** ಅಂದರೆ "ಬೇಕಾದಾಗ ಕೊಲ್ಲಬಹುದೆಂದೂ" ಐತರೇಯ ಬ್ರಾಹ್ಮಣವು ವಿಧಿಸುತ್ತದೆ. ಋಗ್ವೇದದ ಮೇಲಿನ ತಮ್ಮ ಭಾಷ್ಯದಲ್ಲಿ ಆದಿ ಶಂಕರಾಚಾರ್ಯರೂ ಕೂಡ, "ಶೂದ್ರನೆಂದರೆ ಓಡಾಡುವ ರುದ್ರಭೂಮಿ" ಎಂದು ಕರೆದಿದ್ದಾರೆ. ಈ ರೀತಿ ಪ್ರಾಚೀನ ಕಾಲದಲ್ಲಿ ಶೂದ್ರರ ಸ್ಥಿತಿ ತೀರ ಚಿಂತಾಜನಕವಾಗಿದ್ದಿತೆಂಬುದರಲ್ಲಿ ಸಂಶಯವಿಲ್ಲ.

ದಿನನಿತ್ಯ ಅವರು ಮಾಡಬೇಕಾಗಿದ್ದ ಕಾರ್ಯಗಳನ್ನು ಅವಲೋಕಿಸಿದರೆ ಮಾನವೀಯತೆಯ ಕಲ್ಪನೆ ಆಗ ಇನ್ನೂ

ಜನರಲ್ಲಿ ಉದಿಸಿರಲಿಲ್ಲವೆಂದು ತೋರುತ್ತದೆ. ತನ್ನ ಒಡೆಯ ಹಾಗೂ ಒಡೆಯನ ಸಂಬಂಧಿಕರನ್ನು ಪಾಲಕಿಯಲ್ಲಿ ಹೊತ್ತೊಯ್ಯುವುದು, ಅವರ ಪಾದ ಪ್ರಕ್ಷಾಲನ ಮಾಡುವುದು, ಅವರ ಮಲ-ಮೂತ್ರಗಳನ್ನು ಎತ್ತಿ ಹಾಕುವುದು, ಮುಸುರೆ ತೊಳೆಯುವುದು ಮುಂತಾದ ಅತ್ಯಂತ ಕೀಳುಮಟ್ಟದ ಕಾರ್ಯಗಳಲ್ಲಿ ಅವರು ತೊಡಗಬೇಕಾಗಿದ್ದಿತು. ಶೂದ್ರನು ಎಷ್ಟೇ ಶ್ರೀಮಂತನಾಗಿದ್ದರೂ ತನ್ನ ಒಡೆಯನ ಪಾದ ಪ್ರಕ್ಷಾಲನದಿಂದ ಅವನಿಗೆ ವಿಮೋಚನೆ ಇರಲಿಲ್ಲ. ಶೂದ್ರನು ಸೇವೆಮಾಡಬೇಕು ಎಂಬುದನ್ನು ಮಹಾಭಾರತವು ಒತ್ತಿ ಹೇಳಿದೆಯಲ್ಲದೆ, ಆತನಿಗೆ ತನ್ನದೆನ್ನುವ ಯಾವ ಹಕ್ಕನ್ನಾಗಲಿ ಒಡೆತನವನ್ನಾಗಲಿ ಕೊಟ್ಟಿಲ್ಲ.

ಮೇಲಿನ ವಿವರಗಳಿಂದ ವೇದಕಾಲದಲ್ಲಿಯೂ, ಅನಂತರ ಸಮಯದಲ್ಲೂ ಭಾರತದಲ್ಲಿ ಗುಲಾಮ ಸದೃಶರಾದ "ಶೂದ್ರ" ಜನರ ಸ್ಥಿತಿ ತುಂಬ ಚಿಂತಾಜನಕವಾಗಿದ್ದಿತೆಂಬುದು ತಿಳಿದು ಬರುತ್ತದೆ. ಶೂದ್ರ ಜನರ ಈ ತೆರನ ಹೀನಾಯವಾದ ಸ್ಥಿತಿಯನ್ನು ಚನ್ನಾಗಿ ಅರಿತುಕೊಂಡೇ ಕೌಟಿಲ್ಯನು ಈ ದುಷ್ಟ ಪದ್ಧತಿಯನ್ನು ಸಮೂಲ ನಾಶಮಾಡಬೇಕೆಂದು ಬಯಸಿಯಾಗಲೀ ಇಲ್ಲವೆ ಅವರ ಸ್ಥಿತಿಗತಿಗಳಲ್ಲಿ ಸುಧಾರಣೆಗಳನ್ನುಂಟು ಮಾಡಬೇಕೆನ್ನುವ ಉದ್ದೇಶದಿಂದಾಗಲಿ ಅವರಿಗೆ ಅತ್ಯಂತ ಅನುಕೂಲಕರ ಕಾಯ್ದೆ ಕಟ್ಟಳೆಗಳನ್ನು ರೂಪಿಸಿರುವಂತೆ ತೋರುತ್ತದೆ. ಶವಗಳನ್ನು ಹೊತ್ತೊಯ್ಯುವ, ಮಲ ಮೂತ್ರಗಳನ್ನು ಸಾಗಿಸುವ, ಎಂಜಲನ್ನು ತೆಗೆಯುವುದೇ ಮುಂತಾದ ಕೀಳು

ದರ್ಜೆಯ ಕೆಲಸಗಳನ್ನು ಗುಲಾಮರಿಂದ ತೆಗೆದುಕೊಳ್ಳುವಂತಿಲ್ಲ; ನಗ್ನ ಸ್ನಾನಮಾಡುವಾಗ ಸ್ತ್ರೀ ಸೇವಕರನ್ನು [ಗುಲಾಮರನ್ನು] ಸೇವೆಗಾಗಿ ನಿಯಮಿಸಿಕೊಳ್ಳುವಂತಿಲ್ಲ; ಅವರ ಶೀಲವನ್ನು ಕೆಡಿಸುವಂತಿಲ್ಲ; ಅವರ ಶರೀರಕ್ಕಾಗಲಿ, ಮನಸ್ಸಿಗಾಗಲಿ ನೋವನ್ನುಂಟು ಮಾಡುವ ಯಾವ ಕಾರ್ಯವನ್ನೂ ಮಾಡುವಂತಿಲ್ಲ; ನಿಷ್ಕಾರಣವಾಗಿ ಯಾವ ಗುಲಾಮನನ್ನೂ ಬಂಧನದಲ್ಲಿಡುವಂತಿಲ್ಲ ಎಂದು ಮುಂತಾಗಿ ಕೌಟಿಲ್ಯನು ವಿಧಿಸಿದ್ದಾನೆ. ಇದಕ್ಕೆ ಪ್ರತಿಯಾಗಿ ಗುಲಾಮರು ತಮ್ಮ ಸ್ವಂತ ದುಡಿಮೆಯಿಂದ ಗಳಿಸಿದಂತಹ ಹಾಗೂ ತಮ್ಮ ಹಿರಿಯರಿಂದ ತಮಗೆ ಸಲ್ಲಬಹುದಾದಂತಹ ಸಂಪನ್ಮೂಲಗಳನ್ನು ಉಪಭೋಗಿಸುವ ಹಕ್ಕನ್ನು ಕೌಟಿಲ್ಯನು ಗುಲಾಮರಿಗೆನೇ ಬಿಟ್ಟುಕೊಟ್ಟಿದ್ದಾನೆ. ಗರ್ಭಿಣಿಯರಾದ ಗುಲಾಮರನ್ನು ಹಾಗೂ ಎಳೆಯ ವಯಸ್ಸಿನ ಗುಲಾಮರನ್ನು ಮಾರಾಟಮಾಡುವಂತಿಲ್ಲವೆಂದೂ ವಿಧಿಸಿದ್ದಾನೆ. ಅಲ್ಲದೆ, ತಾವು ಮಾರಲ್ಪಟ್ಟ ಬೆಲೆ ತೆತ್ತು ಸ್ವತಂತ್ರರಾಗುವ ಹಕ್ಕನ್ನು ಕೌಟಿಲ್ಯನು ಗುಲಾಮರಿಗೆ ಕೊಟ್ಟಿದ್ದಾನೆ. ತನ್ನ ಒಡೆಯನ ಸಂಪನ್ಮೂಲಗಳಲ್ಲಿ ಗುಲಾಮರಿಗೂ ಪಾಲು ಸಿಕ್ಕಬೇಕು ಎಂಬ ತತ್ವವನ್ನು ಪರೋಕ್ಷವಾಗಿ ಒಂದೆಡೆಗೆ ಅವನು ಸೂಚಿಸಿದ್ದಾನೆ.

ಆದರೆ ಕೌಟಿಲ್ಯನ ಪ್ರಯತ್ನಕ್ಕೆ ವಿಶೇಷ ಯಶಸ್ಸು ಸಿಕ್ಕಿರುವಂತೆ ತೋರುವದಿಲ್ಲ. ಏಕೆಂದರೆ ಅನಂತರ ಕಾಲದಲ್ಲಿ ಗುಲಾಮರ ಸಂಖ್ಯೆ ಹೆಚ್ಚುತ್ತ ಹೋದುದನ್ನೂ, ಅವರ ಸ್ಥಿತಿ ಹೆಚ್ಚು ಹೆಚ್ಚಿಗೆ ಚಿಂತಾಜನಕವಾಗುತ್ತ ನಡೆದುದನ್ನೂ ನಾವು ಗಮನಿಸುತ್ತೇವೆ. ಈ ಕಾಲದ ಸರ್ವ ಸಾಮಾನ್ಯ ಲಕ್ಷಣವಾಗಿದ್ದ

ಸ್ಥಾನಿಕ ಕಾಳಗಗಳೂ, ಜನರಲ್ಲಿ ಹೆಚ್ಚುತ್ತಿದ್ದ ದಾರಿದ್ರ್ಯವೂ, ಆಗಾಗ ಬೀಳುತ್ತಿದ್ದ ಬರಗಾಲ, ನೈಸರ್ಗಿಕ ವಿಪತ್ತು ಮುಂತಾದವುಗಳಿಂದಾಗಿ ಗುಲಾಮರ ಸಂಖ್ಯೆ ದಿನ ದಿನಕ್ಕೆ ಬೆಳೆಯುತ್ತ ನಡೆದಿದ್ದಿತ್ತು. ಗುಲಾಮರ ವ್ಯಾಪಾರವು ಸರ್ವಮಾನ್ಯ ರೂಢಿಯಾಗಿ ಬಿಟ್ಟದ್ದಿತು. ಸ್ತ್ರೀ ಗುಲಾಮರ ವ್ಯಾಪಾರವು ಕೂಟಗಳಲ್ಲಿ ನಡೆಯುತ್ತಿದ್ದ ಬಗೆಗೆ ಸಾಕಷ್ಟು ಐತಿಹ್ಯಗಳಿವೆ. ಈ ಸಮಯಕ್ಕಾಗಲೇ ಮಾನವೀಯ ಮೌಲ್ಯಗಳಲ್ಲಿ ಗಣನೀಯ ಹಿನ್ನಡೆಯಾದದ್ದು ಗುಲಾಮರ ಸ್ಥಿತಿಗತಿಗಳಿಂದ ವ್ಯಕ್ತವಾಗುತ್ತದೆ. ಗುಲಾಮನು ದಣಿವರಿಯದೆ, ಚಳಿ, ಮಳೆ, ಗಾಳಿ, ಬಿಸಿಲೆನ್ನದೆ, ನಿದ್ರೆ, ನೀರಡಿಕೆ, ಹಸಿವೆಗಳ ಪರಿವೆಯಿಲ್ಲದೆ, ಹಗಲು ರಾತ್ರಿಯನ್ನದೆ ಒಡೆಯನಿಗಾಗಿ ದುಡಿಯಬೇಕಾಗಿದ್ದಿತು. ಚಿತ್ರಹಿಂಸೆ ಹಾಗೂ ಬಡಿಯುವುದು ಗುಲಾಮರ ದಿನ ನಿತ್ಯದ ಅನುಭವಗಳಾಗಿದ್ದವು. ದಿನ ನಿತ್ಯದ ಅನೇಕ ಕಾರ್ಯ ಪೂರೈಸುವುದರ ಜೊತೆಗೆ ಅನೇಕ ಸ್ತ್ರೀ ಗುಲಾಮರು ತಮ್ಮ ಒಡೆಯರ ಸಹಪತ್ನಿಯರಾಗಿಯೂ ಸೇವೆ ಸಲ್ಲಿಸಬೇಕಾಗಿದ್ದಿತು. ಭಾರತದ ಮೇಲೆ ಮುಸಲ್ಮಾನರ ದಾಳಿಗಳು ಆಗಲಾರಂಭಿಸಿದಂದಿನಿಂದ ಗುಲಾಮರ ಸಂಖ್ಯೆ ಹಾಗೆಯೇ ಬೆಳೆಯುತ್ತ ಹೋಯಿತು. ಆದರೂ ಕಾಲಾಂತರದಲ್ಲಿ ಸ್ವಲ್ಪ ಮಟ್ಟಿಗೆ ಅವರ ಪರಿಸ್ಥಿತಿ ಸುಧಾರಿಸಿದಂತೆ ತೋರುತ್ತದೆ.

೫. ಒತ್ತಾಯದ ವೇತನ-ರಹಿತ ದುಡಿಮೆ

ಸಾರ್ವಜನಿಕ ಕಾರ್ಯಗಳಿಗಾಗಿ ವೇತನವಿಲ್ಲದೆ ಜನರನ್ನು ಒತ್ತಾಯದಿಂದ ದುಡಿಸಿಕೊಳ್ಳುವ ಪದ್ಧತಿ ಪ್ರಾಚೀನ ಜಗತ್ತಿನ ಎಲ್ಲ ದೇಶಗಳಲ್ಲಿಯೂ ರೂಢಿಯಲ್ಲಿದ್ದಿತು. ಈ ತೆರನ ಪದ್ಧತಿ ಪ್ರಾಚೀನ ಪರ್ಷಿಯಾ ದೇಶದಲ್ಲಿಯೂ ಇಜಿಪ್ತದಲ್ಲಿಯೂ ಇದ್ದುದು ಇತಿಹಾಸದ ಜನಕನಾದ ಹಿರೊಡೋಟಸ್‌ನಿಂದ ತಿಳಿದುಬರುತ್ತದೆ. ಮಧ್ಯಕಾಲೀನ ಯುರೋಪದಲ್ಲಿಯಂತೂ ವೇತನ ರಹಿತ ಒತ್ತಾಯದ ದುಡಿಮೆ ಸಾರ್ವತ್ರಿಕ ಮನ್ನಣೆ ಪಡೆದ ಪದ್ಧತಿಯಾಗಿದ್ದಿತು. ಅದೇ ರೀತಿಯಾಗಿ ಪ್ರಾಚೀನ ಭಾರತವಲ್ಲಿಯೂ ಈ ಪದ್ಧತಿ ರೂಢಿಯಲ್ಲಿದ್ದುದು ತಿಳಿದು ಬರುತ್ತದೆ.

ಪ್ರಾಚೀನ ಭಾರತದಲ್ಲಿ ಈ ತೆರನ ಒತ್ತಾಯದ ವೇತನ ರಹಿತ ದುಡಿಮೆಗೆ 'ವಿಷ್ಟಿ' ಎಂದು ಕರೆಯಲಾಗುತ್ತಿದ್ದಿತು. ತನ್ನ ಕಾರ್ಯಕ್ಕಾಗಿ ತಿಂಗಳಲ್ಲೊಂದು ದಿನ ದುಡಿಯಬೇಕೆಂದು ಪ್ರತಿಯೊಬ್ಬ ವ್ಯಕ್ತಿಯನ್ನು ಒತ್ತಾಯಿಸುವ ಹಕ್ಕು ಅರಸನಿಗಿದ್ದಿತು. ಅಲ್ಲದೆ ಹಳ್ಳಿಯ ಸಮುದಾಯವೂ ಸಾರ್ವಜನಿಕ ಕಾರ್ಯಗಳಿಗಾಗಿ ಪ್ರಸ್ತುತಹಳ್ಳಿಯ ಜನತೆಯನ್ನು ಒತ್ತಾಯ ಪೂರ್ವಕ ತೊಡಗಿಸುವ ಹಕ್ಕನ್ನು ಹೊಂದಿದ್ದಿತು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಗ್ರಾಮ ಹಾಗೂ ನಗರಗಳ ಶಾನುಭೋಗರನ್ನು ಕುರಿತು ಒತ್ತಾಯದ ವೇತನ ರಹಿತ ದುಡಿಮೆಯಲ್ಲಿ ತೊಡಗಿದ

ಜನರ ವಿವರಗಳನ್ನು ಬರೆದಿಡುವಂತೆ ವಿಧಿಸಲಾಗಿದೆ. ಆದರೆ ಈ ಪದ್ಧತಿಯು ಜನತೆಯ ಮೇಲಿನ ಒಂದು ಅಸಹನೀಯ ಭಾರವಾಗಿದ್ದಿತೆಂಬುದು, ಕೌಟಿಲ್ಯನು ರಾಜರನ್ನು ಕುರಿತು, "ಈ ರೀತಿ ಒತ್ತಾಯವಾಗಿ ಜನತೆಯನ್ನು ದುಡಿಸಿಕೊಂಡು ಒಕ್ಕಲುತನ ಪದ್ಧತಿಯನ್ನು ಹಾಳುಗೆಡುಹಬೇಡಿರಿ" ಎಂದು ಹೇಳಿರುವ ರೀತಿಯಿಂದ ತಿಳಿದುಬರುತ್ತದೆ.

ಬೌದ್ಧ ಜಾತಕ ಕತೆಗಳಲ್ಲಿ ರಾಜರು ಪ್ರಜೆಗಳ ಮೇಲೆ ಒತ್ತಾಯದ ದುಡಿಮೆಯನ್ನು ಹೇರುವುದು ತತ್ಕಾಲೀನ ಸಂಪ್ರದಾಯವಾಗಿದ್ದಿತೆನ್ನುವ ರೀತಿಯಲ್ಲಿ ಉಲ್ಲೇಖವಿದೆ. ರುದ್ರವರ್ಮನ ಜುನಾಗಡ ಶಿಲಾಲೇಖ (ಕ್ರಿ. ಶ. ೧೫೦)ದಲ್ಲಿ ಸುದರ್ಶನ ಸರೋವರವನ್ನು ಪುನರ್ನಿರ್ಮಿಸುವಲ್ಲಿ ಪ್ರಜೆಗಳ ಮೇಲೆ ಕರಭಾರವನ್ನಾಗಲಿ ಒತ್ತಾಯದ ದುಡಿಮೆಯನ್ನಾಗಲಿ ಹೇರದೆ, ರಾಜ್ಯದ ಭಾಂಡಾರದಿಂದ ಹಣವ್ಯಯ ಮಾಡಲಾಯಿತೆಂದು ಒತ್ತಿ ಹೇಳಿರುವ ರೀತಿಯಿಂದ ಒತ್ತಾಯದ ವೇತನ ರಹಿತ ದುಡಿಮೆ ಆ ಸಮಯದಲ್ಲಿ ರೂಢಿಯಲ್ಲಿ ಇದ್ದುದೂ, ಪ್ರಜೆಗಳ ಮೇಲೆ ಅದೊಂದು ಅಸಹನೀಯ ಭಾರವಾಗಿದ್ದುದೂ ತಿಳಿದು ಬರುತ್ತದೆ.

ಗುಪ್ತ ಅರಸು ಮನೆತನದ ಆಳಿಕೆಯಲ್ಲಿ ಒತ್ತಾಯದ ದುಡಿಮೆಯನ್ನು ಒಂದು ಬಗೆಯ ಕರಾಕರಣೆಯ ವಿಧಾನವೆಂದು ಬಗೆಯಲಾಗಿದ್ದಿತು. ಗುಪ್ತಕಾಲದ ಶಿಲಾಶಾಸನಗಳಲ್ಲಿ ಇತರ ಕರಗಳೊಡನೆ ಒತ್ತಾಯದ ದುಡಿಮೆಯೂ ಉಲ್ಲೇಖಿತವಾಗಿದೆ. ಕೆಲವೊಂದು ಪ್ರಸಂಗಗಳಲ್ಲಿ, ಹಳ್ಳಿಯನ್ನು ಬ್ರಾಹ್ಮ

ಣರಿಗೆ ದಾನವಾಗಿ ಕೊಡುವಾಗ ಕರಾಕರಣೆ ಮಾಡುವ ಹಕ್ಕಿನೊಡನೆ ಆ ಹಳ್ಳಿಯ ಜನರನ್ನು ವೇತನವಿಲ್ಲದೆ ಒತ್ತಾಯವಾಗಿ ದುಡಿಸಿಕೊಳ್ಳುವ ಹಕ್ಕನ್ನೂ ಅವರಿಗೆ ಬಿಟ್ಟು ಕೊಡಲಾಗುತ್ತಿದ್ದಿತು.

ಕರ್ನಾಟಕದಲ್ಲಿಯೂ ಒತ್ತಾಯದ ವೇತನ ರಹಿತ ದುಡಿಮೆಯ ಪದ್ಧತಿ ರೂಢಿಯಲ್ಲಿದ್ದುದಕ್ಕೆ ಐತಿಹ್ಯಗಳಿವೆ. "ಬಿಟ್ಟೀ" ಎಂಬ ಕನ್ನಡ ಪದವು 'ವಿಷ್ಟಿ' ಎಂಬ ಸಂಸ್ಕೃತ ಪದದ ತದ್ಭವ ರೂಪವಾಗಿದೆ. ಸಂಸ್ಕೃತದಲ್ಲಿ "ವಿಷ್ಟಿ" ಎಂದರೆ ಒತ್ತಾಯದ ದುಡಿಮೆ. ಅದುವೇ ಕನ್ನಡದಲ್ಲಿ ಬಿಟ್ಟೀ ಕಾರ್ಯ ಎಂದು ಇಂದಿಗೂ ಬಳಕೆಯಲ್ಲಿ ಉಳಿದಿದೆ. ಕರ್ನಾಟಕದ ಅನೇಕ ಶಿಲಾ ಶಾಸನಗಳಲ್ಲಿ 'ಹಿಟ್ಟು ಬಿಟ್ಟಿ' ಎಂದು ಉಲ್ಲೇಖವಿರುವುದುಂಟು. 'ಹಿಟ್ಟು' ಎಂದರೆ ವಾಸ್ತವಿಕವಾಗಿ ಹಳ್ಳಿಯ ಶ್ರಮಜೀವಿಗಳ ಪ್ರಾತಿನಿಧಿಕ ಸಭೆಯೆಂದೂ, ಉದ್ಯೋಗವೆಂದೂ ಅರ್ಥವಾಗುವುದಾದರೂ, ಈ ಸಂದರ್ಭಗಳಲ್ಲಿ ಹಿಟ್ಟು ಬಿಟ್ಟಿ ಎನ್ನುವುದು ಅರಸನಿಗಾಗಿ ಜನರು ವೇತನವಿಲ್ಲದೆ ದುಡಿಯುವುದು ಎಂದು ಅರ್ಥವಾಗುತ್ತದೆ.

ಈ ರೀತಿ ಪ್ರಾಚೀನ ಕಾಲದಲ್ಲಿ ಪ್ರಜೆಗಳನ್ನು ಒತ್ತಾಯಪೂರ್ವಕವಾಗಿ ಕೆರೆ ತೋಡುವುದು, ಕಾಲುವೆಗಳನ್ನು ಕಡಿಸುವುದು, ರಸ್ತೆ ನಿರ್ಮಿಸುವುದು, ಯುದ್ಧಭೂಮಿಯಲ್ಲಿ ಕಾವಲು ಕಾಯುವುದು ಹಾಗೂ ಗಾಯಾಳುಗಳನ್ನು ಸಾಗಿಸುವುದೇ ಮುಂತಾದ ಕಾರ್ಯಗಳಲ್ಲಿ ಜನತೆಯನ್ನು ಒತ್ತಾಯವಾಗಿ

ದುಡಿಸಿಕೊಳ್ಳಲಾಗುತ್ತಿದ್ದಿತು. ಹಿಮಾಲಯ ಕಣಿವೆಗಳಲ್ಲಿ ನಿರ್ಮಿತವಾದ ಟಿಬೇಟ ಮಾರ್ಗ ಮತ್ತು ತಂಜಾವೂರಿನಲ್ಲಿಯ ಗುಡಿಗಳು ಇದೇ ರೀತಿಯಾಗಿ ನಿರ್ಮಿತವಾಗಿರುವಂತೆ ತಿಳಿದು ಬರುತ್ತದೆ.

೬ ವೇತನ ಪದ್ಧತಿ

ಪ್ರಾಚೀನ ಭಾರತದಲ್ಲಿ ರೂಢಿಯಲ್ಲಿದ್ದ ದಾಸ್ಯ ಪದ್ಧತಿ ಹಾಗೂ ಒತ್ತಾಯದ ವೇತನ ರಹಿತ ದುಡಿಮೆಯ ಬಗೆಗೆ ಅರಿತು ಕೊಂಡಾದ ಬಳಿಕ ಮೂರನೆಯ ವಿಧದವರಾದ ವೇತನದ ಮೇಲೆ ಉಪಜೀವನ ಸಾಗಿಸುತ್ತಿದ್ದ ಶ್ರಮಜೀವಿಗಳ ವೇತನದವಿಷಯಕ ವಾಗಿ ಈಗ ಅರಿತುಕೊಳ್ಳಬೇಕಾಗಿದೆ. ಶ್ರಮಜೀವಿಗಳ ವೇತನದ ವಿಷಯಕವಾದ ತಿಳುವಳಿಕೆ ಅವರ ಜೀವನ ಮಟ್ಟವನ್ನು ಸೂಚಿ ಸುತ್ತದಲ್ಲದೆ, ಸಮಾಜದಲ್ಲಿ ಅವರ ಸ್ಥಾನಮಾನಗಳನ್ನು ಗುರುತಿ ಸುವುದಕ್ಕೂ ಸಹಾಯಕವಾಗುತ್ತದೆ.

ಈ ಮುಂಚೆ ವಿವರಿಸಿರುವಂತೆ ವೇತನದ ಮೇಲೆ ದುಡಿ ಯುತ್ತಿದ್ದ ಶ್ರಮಜೀವಿಗಳಲ್ಲಿ ಕುಶಲಕರ್ಮಿಗಳೆಂದೂ, ಕರ್ಮ ಕಾರರೆಂದೂ ಎರಡು ವಿಧಗಳಿದ್ದವು. ಪಾಣಿನಿಯು ಕುಶಲ ಕರ್ಮಿಗಳ ಗಳಿಕೆಯನ್ನು 'ವೇತನ' ವೆಂತಲೂ, ಕರ್ಮಕಾರರ ಗಳಿಕೆಯನ್ನು 'ಭೃತಿ' ಎಂದೂ ಕರೆದಿದ್ದಾನೆ. ಕೌಟಿಲ್ಯನು ಶ್ರಮ ಜೀವಿಗಳ ಗಳಿಕೆಯನ್ನು 'ವೇತನ' ಎಂದೇ ಹೆಸರಿಸಿದ್ದಾನೆ.

ಪ್ರಾಚೀನ ಭಾರತದಲ್ಲಿ, ನಿರ್ದಿಷ್ಟಪಡಿಸಿದ ವೇತನ ಹಾಗೂ ಲಾಭಾಂಶ ಎಂದು ಎರಡು ವಿಧದ ರೀತಿಯಲ್ಲಿ ಶ್ರಮಜೀವಿಗಳಿಗೆ ಅವರ ಪರಿಶ್ರಮದ ಪ್ರತಿಫಲವನ್ನು ಕೊಡಲಾಗುತ್ತಿದ್ದಿತು. ನಿರ್ದಿಷ್ಟ ಪಡಿಸಿದ ವೇತನವನ್ನು ಹಣದ ರೂಪದಲ್ಲಿ ಕೊಡ

ಲಾಗುತ್ತಿದ್ದರೆ, ಲಾಭಾಂಶವನ್ನು ವಸ್ತುವಿನ ರೂಪದಲ್ಲಿ ಕೊಡಲಾಗುತ್ತಿದ್ದಿತು. ನಿರ್ದಿಷ್ಟ ಪಡಿಸಿದ ಸಮಯಕ್ಕೆ ವೇತನ ರೂಪದಲ್ಲಿ ಐದು ಪಣಗಳನ್ನು ಪಡೆಯುವ ವ್ಯಕ್ತಿಯನ್ನು 'ಪಂಚಕಃ' ಎಂದು, ಆರು ಪಣಗಳನ್ನು ಪಡೆಯುವ ವ್ಯಕ್ತಿಯನ್ನು 'ಷಷ್ಟಕಃ' ಎಂದು, ಹತ್ತು ಪಣಗಳನ್ನು ಪಡೆಯುವ ವ್ಯಕ್ತಿಯನ್ನು 'ದಶಕಃ' ಎಂದು ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ ಕರೆದಿರುವ ರೀತಿಯಿಂದ ಪ್ರಾಚೀನ ಕಾಲದಲ್ಲೂ ವೇತನ ರೂಪವಾಗಿ ಹಣವನ್ನು ಕೊಡುವ ಪದ್ಧತಿ ರೂಢಿಯಲ್ಲಿದ್ದಿತೆಂಬುದು ದೃಢವಾಗುತ್ತದೆ. ಬಡಿಗರು, ಕಮ್ಮಾರರು, ಚಮ್ಮಾರರು, ಕುಂಬಾರರು ಮುಂತಾದವರಿಗೆ ಒಕ್ಕಲಿಗರು, ತಮ್ಮ ಬೆಳೆಯಲ್ಲಿಯ ಉತ್ತಮ ಭಾಗವನ್ನು ಪ್ರತಿಫಲವಾಗಿ ಕೊಡುತ್ತಿದ್ದ ವಿಷಯ ಪಾಣಿನಿಯಿಂದಲೇ ತಿಳಿದುಬರುತ್ತದೆ.

ಹಣದ ರೂಪದಲ್ಲಿ ವೇತನವನ್ನು ಕೊಡುವುದರ ಜೊತೆಗೆ ಧಾನ್ಯವನ್ನೂ ಕೊಡಬೇಕೆಂದು ಕೌಟಿಲ್ಯನು ಸೂಚಿಸುತ್ತಾನೆ. ಅಲ್ಲದೆ, ಹಣ ಹಾಗೂ ವಸ್ತುವಿನ ರೂಪದಲ್ಲಿನ ವೇತನಗಳು ಪರಸ್ಪರ ಪರಿವರ್ತನಸಾಧ್ಯವಾಗಿರಬೇಕೆಂದೂ ಅವನು ಸೂಚಿಸುತ್ತಾನೆ. ಆಹಾರ ಹಾಗೂ ಬಟ್ಟೆಗಳ ರೂಪದಲ್ಲಿ ಶ್ರಮಜೀವಿಗಳಿಗೆ ಅವರ ಪರಿಶ್ರಮದ ಪ್ರತಿಫಲವನ್ನು ಕೊಡಬೇಕೆಂದು ಪಾತಂಜಲಿಯು ಅಭಿಪ್ರಾಯ ಪಟ್ಟಿದ್ದಾನೆ. "ಭಾರತದಲ್ಲಿ ದನಗಾಹಿಗಳು ಮತ್ತು ಬೇಟೆಗಾರರು ತಮ್ಮ ಪರಿಶ್ರಮಕ್ಕನುಗುಣವಾಗಿ ಅರಸನಿಂದ ಧಾನ್ಯ ಪಡೆಯುತ್ತಾರೆ", ಎಂಬುದಾಗಿ ಮೇಗಾಸ್ತನೀಸ್ ಹೇಳಿದ್ದಾನೆ.

ಶ್ರಮಜೀವಿಗಳಿಗೆ ಕೊಡಲಾಗುತ್ತಿದ್ದ ಧಾನ್ಯರೂಪದ ವೇತನ ಪದ್ಧತಿ ಭಾರತದಲ್ಲಿ ಬಹುಕಾಲದವರೆಗೆ ಮುಂದುವರೆದುಕೊಂಡು ಹೋಗಿದೆ. ರಾಷ್ಟ್ರಕೂಟರ ಕಾಲದಲ್ಲಿ ಓರ್ವ ಬಡಗಿಯು ೬೦ ಮಣದಷ್ಟು ಕಾಳನ್ನು ಸಂಪಾದಿಸುತ್ತಿದ್ದರೆ, ಕೆಳವರ್ಗದ ಕೆಲಸಗಾರರು ೨೪ ಮಣದಷ್ಟು ಸಂಪಾದಿಸುತ್ತಿದ್ದಂತೆ ತಿಳಿದುಬರುತ್ತದೆ. ಅಂದರೆ ಬಡಗಿಯ ಸಂಪಾದನೆ ಪ್ರತಿ ದಿವಸಕ್ಕೆ ೭ತ್ತಿ ಸೇರಿನಷ್ಟು ಅಕ್ಕಿಯಾದರೆ, ಕೆಳವರ್ಗದ ಶ್ರಮಜೀವಿಗಳ ಪ್ರತಿದಿನದ ಸಂಪಾದನೆ ೩ ಸೇರಿನಷ್ಟಾಗುತ್ತಿದ್ದಿತು. ಭಾರತದಲ್ಲೆಲ್ಲ ಪ್ರಸ್ತುತ ಸಮಯದ ವರೆಗೆ ರೂಢಿಯಲ್ಲಿದ್ದ ಆಯಗಾರ ಪದ್ಧತಿಯು, ಒಕ್ಕಲಿಗರು ಧಾನ್ಯರೂಪದಲ್ಲಿ ಕಮ್ಮಾರರು, ಚಮ್ಮಾರರು, ಬಡಿಗರು, ಕುಂಬಾರರು ಮುಂತಾದ ಶ್ರಮಜೀವಿಗಳಿಗೆ ಕೊಡುತ್ತಿದ್ದ ವೇತನ ಪದ್ಧತಿಯ ಅವಶೇಷವಾಗಿದೆ.

ವೇತನಾವಧಿ:— ಪಾಣಿನಿಯ ಕಾಲದಲ್ಲಿ ಒಂದು ತಿಂಗಳನ್ನು ಸಾಮಾನ್ಯವಾಗಿ ವೇತನಾವಧಿಯೆಂದು ಗಣಿಸಲಾಗುತ್ತಿದ್ದಿತು. ಪ್ರತಿ-ತಿಂಗಳು ಐದು ಕಾರ್ಷಾಪಣ (ಪ್ರಾಚೀನ ಕಾಲದ ನಾಣ್ಯ)ಗಳನ್ನು ವೇತನವಾಗಿ ಸಂಪಾದಿಸುತ್ತಿದ್ದ ಶ್ರಮಜೀವಿಯನ್ನು ಪಂಚಕ-ಮಾಸಿಕಃ ಎಂದೂ, ಆರು ಕಾರ್ಷಾಪಣಗಳನ್ನು ಸಂಪಾದಿಸುತ್ತಿದ್ದ ಶ್ರಮಜೀವಿಯನ್ನು ಷಟ್ಕ-ಮಾಸಿಕಃ ಎಂದೂ, ಅದೇ ರೀತಿಯಾಗಿ ಪ್ರತಿ ತಿಂಗಳು ಹತ್ತು ಕಾರ್ಷಾಪಣಗಳನ್ನು ಸಂಪಾದಿಸುತ್ತಿದ್ದ ಶ್ರಮಜೀವಿಯನ್ನು ದಶಕ-ಮಾಸಿಕಃ ಎಂದೂ ಕರೆಯುತ್ತಿದ್ದ ರೀತಿಯಿಂದ

ಆಗ ಮಾಸಿಕ ವೇತನ ಪದ್ಧತಿ ವಿಶೇಷ ರೂಢಿಯಲ್ಲಿ ದ್ದಂತೆ ತಿಳಿದು ಬರುತ್ತದೆ. ಹೊಲದಲ್ಲಿ ದುಡಿಯುವವನಿಗೆ ೧೪ ಪಣ ವೇತನವನ್ನು ಕೊಡಬೇಕೆಂದು ಸೂಚಿಸುವಲ್ಲಿ ಕೌಟಿಲ್ಯನು ತಿಂಗಳನ್ನೇ ವೇತನಾವಧಿಯೆಂದು ಗಣಿಸಿರುವಂತಿದೆ.

ಪ್ರಾಚೀನ ಕಾಲದಲ್ಲಿ ದಿನಗೂಲಿಯ ಪದ್ಧತಿಯೂ ಬಳಕೆ ಯಲ್ಲಿದ್ದಿತು. ಪ್ರತಿದಿನ ಒಂದು ಪಾದಿಕಾ (ಕಾರ್ಷಾಪಣದ ನಾಲ್ಕನೆಯ ಭಾಗ) ನಾಣ್ಯ ಸಂಪಾದಿಸುವ ಶ್ರಮಜೀವಿಯ ಉಲ್ಲೇಖ ಪಾತಂಜಲಿಯಲ್ಲಿ ಸಿಕ್ಕುತ್ತದೆ.

ಇಷ್ಟಲ್ಲದೆ, ಒಂದು ದಿನ, ಒಂದು ತಿಂಗಳು, ಅರ್ಧ ತಿಂಗಳು, ಆರು ತಿಂಗಳು, ಒಂದು ವರ್ಷದ ಅವಧಿಯವರೆಗಿನ ಒಪ್ಪಂದದ ಮೇರೆಗೂ ಕೆಲಸಗಳನ್ನು ಪೂರೈಸಿಕೊಡಲಾಗುತ್ತಿ ದ್ದಿತು. ಆಗ ನಿರ್ದಿಷ್ಟ ಪಡಿಸಿದ ವೇತನವನ್ನು ಕೊಡಲಾಗು ತ್ತಿದ್ದಿತು. ಆಯಗಾರ ಪದ್ಧತಿಯ ಪ್ರಕಾರ, ಸುಗ್ಗಿಯ ಕಾಲದಲ್ಲಿ ಧಾನ್ಯರೂಪದಲ್ಲಿ ವರ್ಷದಲ್ಲೊಮ್ಮೆ ಮಾತ್ರ ವೇತನ ಕೊಡುವ ಪದ್ಧತಿ ಮಧ್ಯಕಾಲದಲ್ಲಿ ವಿಶೇಷವಾಗಿದ್ದಿತ.

ವೇತನವಿಷಯಕ ನಿಯಮಗಳು: ಕೌಟಿಲ್ಯನು ವೇತನಕ್ಕೆ ಸಂಬಂಧಿಸಿದಂತೆ ಕೆಳಗಿನ ನಿಯಮಗಳನ್ನು ವಿಧಿಸಿದ್ದಾನೆ: ಒಪ್ಪಂದಕ್ಕನುಗುಣವಾಗಿ ಇಲ್ಲವೆ ಭರವಸೆಯಿತ್ತ ಮೇರೆಗೆ ಶ್ರಮ ಜೀವಿಗಳಿಗೆ ವೇತನವನ್ನು ಕೊಡಬೇಕು. ವೇತನ ಸಂಬಂಧವಾಗಿ ಭಿನ್ನಾಭಿಪ್ರಾಯಗಳು ತಲೆದೋರಿದಾಗ ಅವುಗಳನ್ನು ಸುಲಭ ವಾಗಿ ಸಾಕ್ಷಿಗಳ ಸಹಾಯದಿಂದ ಬಗೆಹರಿಸಲು ಅನುಕೂಲವಾ

ಗಾವ ದೃಷ್ಟಿಯಿಂದ ವೇತನ ಸಂಬಂಧಿ ಒಪ್ಪಂದಗಳನ್ನು ನೆರೆ ಹೊರೆಯವರ ಸಮ್ಮುಖದಲ್ಲಿ ಮಾಡಿಕೊಳ್ಳಬೇಕು. ಆರಂಭ ದಲ್ಲಿ ವೇತನ ಸಂಬಂಧಿ ಒಪ್ಪಂದವಾಗಿರದಿದ್ದ ಪಕ್ಷದಲ್ಲಿ, ಕಾರ್ಯ ಹಾಗೂ ಅದಕ್ಕೆ ಬೇಕಾದ ಸಮಯಕ್ಕೆ ಅನುರೂಪವಾಗಿ ಇಲ್ಲವೆ ಒಡೆಯನ ಉತ್ಪಾದನೆಯ ಹತ್ತನೆಯ ಭಾಗದಷ್ಟು ವೇತನವನ್ನು ಕೊಡಬೇಕು. ಇನ್ನುಳಿದ ಸಂದರ್ಭಗಳಲ್ಲಿ ರೂಢಿಯಲ್ಲಿದ್ದ ಪ್ರಕಾರ ಅಥವಾ ಬಲ್ಲಿದರು ನಿರ್ದಿಷ್ಟ ಪಡಿಸಿದ ಮೇರೆಗೆ ವೇತನವನ್ನು ಕೊಡಬೇಕು. ಈ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಒಡೆಯ ಹಾಗೂ ಶ್ರಮಜೀವಿಗಳು ಉಭಯತರಿಗೂ ಕಠಿಣ ದಂಡ ವಿಧಿಸಬೇಕೆಂದು ಕೌಟಿಲ್ಯನು ಸೂಚಿಸಿದ್ದಾನೆ.

೭ ಶ್ರಮಜೀವಿಗಳು ಮತ್ತು ಜಾತಿ ಪದ್ಧತಿಯ ಬೆಳವಣಿಗೆ

ಭಾರತದ ಜಾತಿ ಪದ್ಧತಿಯ ಉತ್ಕ್ರಾಂತಿಯಲ್ಲಿ ಶ್ರಮಜೀವಿಗಳ ವರ್ಗಗಳು ಮಹತ್ವದ ಪಾತ್ರವಾಡುತ್ತ ಬಂದಿವೆ. ವಂಶಪರಂಪರಾಗತವಾಗಿ ಒಂದು ಮನೆತನದವರು ಒಂದೇ ಉದ್ಯೋಗ ಮಾಡುತ್ತ ಬಂದುದರಿಂದ ಒಂದು ಉದ್ಯೋಗಕ್ಕೆ ಸಂಬಂಧಿಸಿದ ಕೌಶಲ್ಯ ಕೆಲವೇ ಜನರ ಸ್ವತ್ತಾಗಿ ಬಿಟ್ಟಿತು. ಮತ್ತು ವಂಶಪರಂಪರಾಗತವಾಗಿ ಬಂದ ಉದ್ಯೋಗವಲ್ಲದೆ ಬೇರಿನ್ನಾವ ಉದ್ಯೋಗವೂ ಅವರಿಗೆ ಬರುವಂತಿರಲಿಲ್ಲ. ಈ ರೀತಿಯಾದ ಒಂದು ವಿಶಿಷ್ಟ ಉದ್ಯೋಗದ ಸಕಲ ಕೌಶಲ್ಯ ಒಂದು ವರ್ಗದ ಸ್ವತ್ತಾಗಿ ಉಳಿಯುವದನ್ನೇ ಒಂದು ದೃಷ್ಟಿಯಲ್ಲಿ ಶ್ರಮವಿಭಜನೆ ಎಂದು ಹೇಳುವುದಾದರೆ, ಈ ಶ್ರಮವಿಭಜನೆಯೇ ಭಾರತದಲ್ಲಿ ಜಾತಿಪದ್ಧತಿಯ ಬೆಳವಣಿಗೆಗೆ ಕಾರಣವಾಯಿತೆಂದು ಹೇಳಬೇಕು. ಶರೀರ ಸಂಬಂಧವೇರ್ಪಡುವಾಗ ಔದ್ಯೋಗಿಕ ಕೌಶಲ್ಯಕ್ಕೆ ಬಹಳಷ್ಟು ಮಹತ್ವ ಬಂದಿತು. ತಮ್ಮ ಮನೆತನದ ಉದ್ಯೋಗದಲ್ಲಿಯೇ ಕೌಶಲ್ಯವನ್ನು ಸಾಧಿಸಿದ್ದ ಹೆಣ್ಣು ಮಕ್ಕಳನ್ನು ತಂದುಕೊಳ್ಳುವುದು ಅನಿವಾರ್ಯವಾಗಿ ಪರಿಣಮಿಸಿತು. ಈ ರೀತಿಯಾಗಿ ಶರೀರ ಸಂಬಂಧದಿಂದಾಗಿಯೂ ಪರಸ್ಪರ ಸಹಕಾರದ ಅವಶ್ಯಕತೆಯಿಂದಾಗಿಯೂ ಒಂದು ಉದ್ಯೋಗಕ್ಕೆ ಸಂಬಂಧಿಸಿದ ಜನರ ಒಂದು ಒಳ್ಳೆಯ ಸುಸಂಘಟಿತ

ಘಟಕ ರೂಪುಗೊಂಡಿತು. ಈ ಸುಸಂಘಟಿತ ಘಟಕವನ್ನೇ ನಾವು 'ಜಾತಿ' ಎಂದು ಕರೆಯುವುದು.

ಉದ್ಯೋಗ ಮೂಲವಾದ ಜಾತಿ ಪದ್ಧತಿಯು ಬೆಳವಣಿಗೆ ಕಾಲಾನುಕ್ರಮದಲ್ಲಿ ಔದ್ಯೋಗಿಕ ಕೇಂದ್ರೀಕರಣಕ್ಕೂ ಎಡೆ ಮಾಡಿಕೊಟ್ಟಿತು. ಶರೀರ ಸಂಬಂಧ ಹಾಗೂ ಪರಸ್ಪರ ಸಹ ಕಾರದ ಅವಶ್ಯಕತೆಗಳು ಒಂದು ವಿಶಿಷ್ಟ ಉದ್ಯೋಗ ನಿರತರಾದ ಜನರು ಒಂದೆಡೆಗೆ ಕೇಂದ್ರಿಕೃತರಾಗುವಂತೆ ಮಾಡಿ ದವು. ಹೀಗಾಗಿ ಒಂದೊಂದು ಊರು ಅಥವಾ ಊರಿನಲ್ಲಿಯ ಕೆಲವೊಂದು ಕೇರಿಗಳು ಒಂದು ವಿಶಿಷ್ಟ ಉದ್ಯೋಗಕ್ಕೆ ಸಂಬಂಧಿ ಸಿದ ಜನರ ವಸಾಹತುಗಳಾಗಿ ಪರಿವರ್ತಿಸಿದವು. "ಕಮ್ಮಾರ ಗ್ರಾಮ" ಎನ್ನುವುದು ಕಬ್ಬಿಣ ಕೆಲಸದಲ್ಲಿ ತೊಡಗಿದ ಒಂದು ಸಾವಿರ ಮನೆತನಗಳ ವಸಾಹತು ಆಗಿದ್ದಿತೆಂಬುದು ಬುದ್ಧ ಜಾತಕ ಕತೆಗಳಿಂದ ತಿಳಿದುಬರುತ್ತದೆ.

೮ ಶ್ರಮ ಗೌರವ

ವಂಶಪರಂಪರಾಗತ ಔದ್ಯೋಗಿಕ ಕೌಶಲ್ಯವು ಭಾರತ ಪಲ್ಲಿ ಜಾತಿ ಪದ್ಧತಿಯ ಬೆಳವಣಿಗೆಯಲ್ಲಿ ಆಡಿದ ಮಹತ್ವದ ಪಾತ್ರವನ್ನು ಅಲ್ಲಗಳೆಯಲಿಕ್ಕಾಗದಿದ್ದರೂ, ಪ್ರಾಚೀನ ಕಾಲದಲ್ಲಿ ಜಾತಿ ವಿಷಯಕ ಮೇಲು ಕೀಳು ಭಾವನೆ ಇರಲಿಲ್ಲವೆಂಬುದು ಅನೇಕ ಉದಾಹರಣೆಗಳಿಂದ ವ್ಯಕ್ತವಾಗುತ್ತದೆ. ಅನಂತರ ಕಾಲ ದಲ್ಲಿ ಜಾತಿವಿಷಯಕ ಮೇಲು ಕೀಳು ಭಾವನೆಗಳು ಭಾರತೀಯ ರಲ್ಲಿ ಬೆಳೆದುಕೊಂಡು ಬಂದುದು ಶ್ರಮಗೌರವದ ಭಾವನೆಯ ಕೊರತೆಯಿಂದಾಗಿ. ಕೆಲವೊಂದು ವಿಧದ ಉದ್ಯೋಗಗಳು ಕೀಳುಮಟ್ಟದವು, ಕೆಲವೊಂದು ವಿಧದ ಉದ್ಯೋಗಗಳು ಉಚ್ಚ ಮಟ್ಟದವು ಎಂಬ ಕಲ್ಪನೆಯೇ ಮುಂದೆ ಜಾತಿ ವಿಷಯಕ ಮೇಲು ಕೀಳು ಭಾವನೆಗಳಿಗೆ ಎಡೆ ಮಾಡಿಕೊಟ್ಟಿತು. ಆದರೆ ಪ್ರಾಚೀನ ಕಾಲದಲ್ಲಿ ಜನತೆಯಲ್ಲಿ ನಿಚ್ಚಳವಾಗಿ ಶ್ರಮಗೌರವದ ಭಾವನೆಗಳು ಬೇರೂರಿದ್ದುದರಿಂದ ಜಾತೀಯ ವೈಷಮ್ಯ ಭಾವನೆ ಗಳಿಗೆ ಅವಕಾಶವೇ ಇರಲಿಲ್ಲವೆಂಬುದಕ್ಕೆ ಸಾಕಷ್ಟು ಐತಿಹ್ಯ ಗಳಿವೆ. ಮೊದಲನೆಯದಾಗಿ, ಒಂದು ವಿಧದ ಉದ್ಯೋಗಸ್ಥರು ಬೇರೆ ಉದ್ಯೋಗ ಮಾಡಬಾರದೆಂಬ ಸಾಮಾಜಿಕ ಕಟ್ಟಳೆ ಯಿರಲಿಲ್ಲ. ಕೈಗಾರಿಕೆಯನ್ನು ಕಲಿಯುವ ವಿದ್ಯಾರ್ಥಿ ಹಾಗೂ ಆತನ ಶಿಕ್ಷಕರ ನಡುವಿನ ಸಂಬಂಧವನ್ನು ಕುರಿತಾಗಿ ನಾರದ ಸ್ಮೃತಿಯಲ್ಲಿನ ಕಟ್ಟಳೆಗಳಿಂದ ಜನರಿಗೆ ಬೇಕಾದ ಉದ್ಯೋಗ

ವನ್ನು ಅವಲಂಬಿಸಲಿಕ್ಕೆ ಅವಕಾಶವಿದ್ದಂತೆ ತಿಳಿದುಬರುತ್ತದೆ. ಮಹತ್ವದ ಧರ್ಮಶಾಸ್ತ್ರಗಳಲ್ಲಿ, ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ 'ದ್ವಿಜ'ರು ಶಾರೀರಿಕ ಶ್ರಮದಲ್ಲಿ ತೊಡಗಬಹುದೆಂದು ಹೇಳಿರುವ ರೀತಿಯಿಂದ, ಪ್ರಾಚೀನ ಕಾಲದಲ್ಲಿ ಶ್ರಮಗೌರವದ ಭಾವನೆ ಇದ್ದುದರ ಕಲ್ಪನೆ ನಮಗಾಗುತ್ತದೆ. ಶಂತನು ಹಾಗೂ ಆತನ ಸಹೋದರನಾದ ದೇವಾಪಿ ಇವರಲ್ಲಿ ಮೊದಲನೆಯವನು ರಾಜನ್ಯ (ಕ್ಷತ್ರಿಯ) ನಾದರೆ, ಎರಡನೆಯವನು ಪುರೋಹಿತನಾಗಿದ್ದ ಉದಾಹರಣೆಯಿಂದ, ಜನನ ಹಾಗೂ ಉದ್ಯೋಗದ ಮೇಲಿಂದ ಜಾತಿ ನಿರ್ಧರಿತವಾಗುತ್ತಿದ್ದಿಲ್ಲವೆಂಬುದೂ, ಒಂದೇ ಮನೆತನ ದವರು ಉದ್ಯೋಗದ ವಿಷಯಕನಾದ ಮೇಲು-ಕೀಳು ಭಾವನೆ ಗಳಿಲ್ಲದೆ ಬೇಕಾದ ಉದ್ಯೋಗವನ್ನು ಅವಲಂಬಿಸಬಹುದಾಗಿದ್ದಿ ತೆಂಬುದೂ ವಿದಿತವಾಗುತ್ತದೆ. ಋಗ್ವೇದ (IX 112.3) ದಲ್ಲಿ "ನಾನು ಮಂತ್ರಪಠಣ ಮಾಡುವವನಾದರೆ, ನನ್ನ ತಂದೆ ವೈದ್ಯನೂ, ನನ್ನ ತಾಯಿ (ಕಾಳು) ಬೀಸುವವಳೂ ಆಗಿದ್ದಾಳೆ" ಎಂಬ ಕವಿಯ ಮಾತಿನಿಂದಲೂ, ಒಂದೇ ಜಾತಿಗೆ ಸೇರಿದ ಒಂದೇ ಮನೆತನದ ಜನರು ಮೇಲು ಕೀಳು ಭಾವನೆಯಿಲ್ಲದೆ ಬೇರೆ ಬೇರೆ ಕೆಲಸಗಳಲ್ಲಿ ತೊಡಗಿರುತ್ತಿದ್ದ ವಿಷಯ ತಿಳಿದು ಬರುತ್ತದೆ.

ಕುಶಲ ಕೈಗಾರಿಕೆಯ ಉದ್ಯೋಗಗಳು ಕೀಳುದರ್ಜೆಯ ವೆಂದು ಗಣಿಸಲ್ಪಡದೆ, ಪ್ರಾಚೀನ ಕಾಲದಲ್ಲಿ ವಿಶೇಷ ಮನ್ನ ಣೆಗೊಳಗಾಗಿದ್ದವೆಂಬುದಕ್ಕೆ ಅನೇಕ ರಾಜರು ಕೆಲವೊಂದು ಸಂದರ್ಭಗಳಲ್ಲಿ ಇಂತಹ ಕೆಲಸಗಳಲ್ಲಿ ನಿರತರಾಗಿದ್ದ ಉದಾಹರ

ಣಿಗಳೇ ನಿದರ್ಶನ. ಜಾತಕ ಕತೆಯೊಂದರಲ್ಲಿ ತಾನು ಬಯಸಿದ ಪತ್ನಿಯ ಅಂಗಸೌಷ್ಠವವನ್ನು ಬಂಗಾರದಲ್ಲಿ ತಾನು ಸ್ವತಃ ಕೆತ್ತಿದ ರಾಜನ ಉಲ್ಲೇಖವಿದೆ. ಬಾಣ ಕವಿಯ ಹರ್ಷ ಚರಿತದಲ್ಲಿ ಓರ್ವ ರಾಜಕುಮಾರಿಯ ಮದುವೆಯ ಸಂದರ್ಭ ದಲ್ಲಿ ಅನೇಕ ರಾಜರು ಬಡಿಗತನದ ಕೆಲಸದಲ್ಲಿ ತೊಡಗಿ ಅರಮನೆಯ ಅಲಂಕರಣ ಕಾರ್ಯದಲ್ಲಿ ಸಹಕರಿಸಿದ ಉಲ್ಲೇಖವಿದೆ.

ಈ ಎಲ್ಲ ನಿದರ್ಶನಗಳಿಂದ ಪ್ರಾಚೀನ ಭಾರತದ ಜನ ರಲ್ಲಿ ಶ್ರಮಗೌರವದ ಭಾವನೆ ಇದ್ದಂತೆಯೂ, ಮೇಲು ಕೀಳು ಭಾವನೆಯಿಲ್ಲದೆ ಎಲ್ಲ ಜಾತಿಯ ಜನರಿಗೆ ಬೇಕಾದ ಉದ್ಯೋ ಗದಲ್ಲಿ ತೊಡಗಲಿಕ್ಕೆ ಅವಕಾಶವಿದ್ದಂತೆಯೂ ತಿಳಿದುಬರುತ್ತದೆ. ಆದರೆ ಈ ತೆರನ ಶ್ರಮಗೌರವದ ಭಾವನೆಯು ಕೆಲವೊಂದು ಮಟ್ಟಿಗೆ ಸೀಮಿತವಾಗಿದ್ದಿತು. ಚಂಡಾಲ, ಚರ್ಮಕಾರ, ಕಸಗೂಡಿಸುವವರು, ಬೇಡರು ಮುಂತಾದವರ ಕೆಲಸಗಳು ತೀರ ಕೆಳದರ್ಜೆಯವೆಂದು ಗಣಿಸಲ್ಪಡುತ್ತಿದ್ದುದರಿಂದ, ಸಮಾಜ ದಲ್ಲಿ ಅವರ ಸ್ಥಾನ ಕೆಳಮಟ್ಟದ್ದಾಗಿದ್ದಿತಲ್ಲದೆ, ಅವರು ಅಂತ್ಯ ಜರೆಂದು ಗಣಿಸಲ್ಪಡುತ್ತಿದ್ದರು.

೯ ಶ್ರಮಜೀವಿಗಳ ಸಂಘ ಸಂಸ್ಥೆಗಳು

ಸಿಡ್ನಿಲೋ ಎಂಬ ವಿದ್ವಾಂಸನು ತನ್ನ "ವ್ಹಿಜನ್ ಆಪ್ ಇಂಡಿಯಾ" ಎಂಬ ಹೊತ್ತಿಗೆಯಲ್ಲಿ "ಹಿಂದೂಗಳಿಗೆ ಜಾತಿ ಪದ್ಧತಿಯೇ ಅವರ ಸಮಾಜ" ಅವರ ಸಂಘಟನೆ, ಅವರ ಕಲ್ಯಾಣ ಸಮಾಜ ಹಾಗೂ ಅವರ ವಿಶ್ವಸಮಾಜ" ಎಂದು ಹೇಳಿದ್ದಾನೆ. ಭಾರತದಲ್ಲಿ ಜಾತಿ ಪದ್ಧತಿ ಬೆಳೆದುಕೊಂಡು ಬರಲಿಕ್ಕೆ ಉದ್ಯೋಗಗಳೇ ಮೂಲ ಕಾರಣವೆಂಬುದನ್ನು ಅರಿತಿದ್ದೇವೆ. ಉದ್ಯೋಗಮೂಲವಾದ ಜಾತಿ ಪದ್ಧತಿಯ ಬೆಳವಣಿಗೆಯಿಂದಾಗಿಯೂ, ಒಂದೇ ವಿಧದ ಉದ್ಯೋಗಗಳು ಒಂದು ಕಡೆಗೆ ಕೇಂದ್ರೀಕೃತವಾಗುತ್ತ ಸಾಗಿದ ಕಾರಣದಿಂದಲೂ ವಿಶೇಷತಃ ಕುಶಲ ಕೈಗಾರಿಕೆಯಲ್ಲಿ ತೊಡಗಿದ ಜನರಿಗೆ ತಮ್ಮವೇ ಆದ ಸಂಘ ಸಂಸ್ಥೆಗಳನ್ನು ನಿರ್ಮಿಸಿಕೊಂಡು ತನ್ಮೂಲಕ ತಮ್ಮ ಅನಾನುಕೂಲತೆಗಳನ್ನು ಸುಲಭವಾಗಿ ನಿವಾರಿಸಿಕೊಳ್ಳುವದು ಸಾಧ್ಯವಾಯಿತು. ಕುಶಲ ಕೆಲಸಗಾರರ ಸಂಘಟನೆಗಳು ಆಯಾ ಕೆಲಸಗಾರರ ತೊಂದರೆಗಳನ್ನು ನಿವಾರಿಸುವುದರ ಜೊತೆಗೆ ಸಮಾಜದಲ್ಲಿ ಅವರಿಗೊಂದು ಗಣ್ಯಸ್ಥಾನವನ್ನು ದೊರಕಿಸಿಕೊಡುವಲ್ಲಿ ಸಹಾಯಕವಾದವು. ಅಲ್ಲದೆ, ಅವು ಆರ್ಥಿಕ ಸ್ಥಿತಿ-ಗತಿಗಳ ಸುಧಾರಣೆಯ ದಿಶೆಯಲ್ಲಿಯೂ ಸ್ಥಳೀಯ ಹಾಗೂ ಪ್ರಾಂತಿಕ ಆಡಳಿತ ವ್ಯವಸ್ಥೆಯಲ್ಲಿಯೂ ಮಹತ್ವದ ಪಾತ್ರವನ್ನಾಡುತ್ತ ಬಂದಿವೆ. ಧಾರ್ಮಿಕ ಕ್ಷೇತ್ರ

ದಲ್ಲೂ ಇಂತಹ ಸಂಘಟನೆಗಳ ಪಾತ್ರ ಮಹತ್ವಪೂರ್ಣ ವಾದುದಾಗಿದೆ.

ಸಂಘಜೀವನದ ಪ್ರಯೋಜನಗಳನ್ನು ಕೈಗಾರಿಕೆಯಲ್ಲಿ ತೊಡಗಿದ ಜನರು ವೇದಕಾಲದಷ್ಟು ಹಿಂದೆಯೇ ಅರಿತಿದ್ದಂತೆ ತೋರುತ್ತದೆ. ಕುಶಲ ಕರ್ಮಿಗಳ ಸಂಘ ಸಂಸ್ಥೆಗಳಿಗೆ ಅನಂತರ ದಲ್ಲಿ ರೂಢಿಯಲ್ಲಿ ಬಂದ ಶ್ರೇಣಿ, ಪೂಗ, ಗಣ, ವ್ರಾತ ಮುಂತಾದ ಶಬ್ದಗಳು ವೇದಕಾಲದಲ್ಲಿ ಬಳಿಕೆಯಲ್ಲಿರುವುದು ಕಂಡುಬರುತ್ತದೆ. ಪಾಣಿನಿಯ ಕಾಲಕ್ಕಾಗಲೇ 'ವ್ರಾತ' ಎಂಬವು ತಮ್ಮ ಉಪಜೀವನಕ್ಕಾಗಿ ವೈಬೆವರು ಸುರಿಸಿ ದುಡಿವ ವಿವಿಧ ಜಾತಿಯ ಜನಗಳ ಸಂಘಟನೆಗಳಾಗಿದ್ದವೆಂಬುದು ಪಾಣಿನಿಯ 'ಅಷ್ಟಾಧ್ಯಾಯಿ,' ಗ್ರಂಥದ ಮೇಲೆ, ಪಾತಂಜಲಿಯು ಬರೆದಿರುವ 'ಮಹಾಭಾಷ್ಯ, ಎಂಬ ಟೀಕಾಗ್ರಂಥದಿಂದ ತಿಳಿದುಬರುತ್ತದೆ. ಯಾಜ್ಞವಲ್ಕ್ಯ ಸ್ಮೃತಿಯ ಮೇಲಿನ ಟೀಕೆಯಾದ ಮಿತಾಕ್ಷರವು 'ಪೂಗ' ಎನ್ನುವುದು ವಿವಿಧ ಉದ್ಯೋಗಗಳನ್ನು ಅವಲಂಬಿಸಿದ ಹಲವು ಜಾತಿಯ ಜನರು ನಿರ್ಮಿಸಿಕೊಂಡ ಸಂಸ್ಥೆಯಾಗಿದ್ದರೆ, 'ಶ್ರೇಣಿ' ಎನ್ನುವುದು ಒಂದೇ ಉದ್ಯೋಗವನ್ನು ಅವಲಂಬಿಸಿದ ಒಂದೇ ಜಾತಿಯ ಜನರ ಸಂಘಟನೆಯಾಗಿದ್ದಿತೆಂದು ವಿವರಿಸುವು ದರ ಜೊತೆಗೆ ತಂಬೂಲಿಕಾ, ಕುವಿಂದ, ಚರ್ಮಕಾರ ಮುಂತಾ ದವು ಇಂತಹ ಶ್ರೇಣಿಗಳಾಗಿದ್ದವೆಂದು ತಿಳಿಸುತ್ತದೆ.

ಕೌಟಿಲ್ಯನ ಕಾಲಕ್ಕಾಗಲೇ ಕುಶಲ ಕರ್ಮಿಗಳ ಸಂಘಟನೆ ಗಳು ಸಾಕಷ್ಟು ಜನಪ್ರಿಯವೂ ಪ್ರಭಾವಶಾಲಿಯೂ ಆಗಿದ್ದ

ವೆನ್ನಲಿಕ್ಕೆ ಇಂತಹ ಸಂಘಟನೆಗಳ ಸದಸ್ಯರಿಗೆ ಕೆಲವೊಂದು ವಿಶೇಷ ಹಕ್ಕುಬಾಧ್ಯತೆಗಳನ್ನು ಕೊಡಬೇಕೆಂದು ಕೌಟಿಲ್ಯನು ಪ್ರತಿಪಾದಿಸಿರುವ ರೀತಿಯಿಂದ ವ್ಯಕ್ತವಾಗುತ್ತದೆ. ಕೌಟಿಲ್ಯನು ಶ್ರಮಜೀವಿಗಳ ಸಂಘಗಳಿಗೆ ಸಂಬಂಧಿಸಿದಂತೆ ವಿಧಿಸಿರುವ ನಿಯಮಾವಳಿಗಳಿಂದ ಅವುಗಳ ಕಾರ್ಯವಿಧಾನವನ್ನು ನಾವು ಚೆನ್ನಾಗಿ ಅರಿತುಕೊಳ್ಳಬಹುದಾಗಿದೆ. ಸಂಘದ ಸಂಪೂರ್ಣ ಪ್ರಾಪ್ತಿಯನ್ನು ಸರ್ವ ಸದಸ್ಯರಲ್ಲಿ ಸರಿಯಾಗಿ ಹಂಚಬೇಕು; ಒಂದು ಒಪ್ಪಂದದನ್ವಯ ಕಾರ್ಯಪ್ರವೃತ್ತರಾದ ಬಳಿಕ ಸಂಘವನ್ನು ತ್ಯಜಿಸುವ ಸದಸ್ಯನು ದಂಡನೆಗೆ ಒಳಗಾಗಬೇಕು; ಸಂಘವನ್ನು ಯಶಸ್ವಿಯಾಗಿ ನಡೆಯಿಸಿಕೊಂಡು ಹೋಗುವ ಹೊಣೆಗಾರಿಕೆ ಎಲ್ಲರ ಮೇಲೆಯೂ ಇರುತ್ತದೆ. ಒಮ್ಮೆ ಕ್ಷಮಿಸಿ ಯಾದ ಮೇಲೆಯೂ ಹೊಣೆಗಾರಿಕೆಯಿಂದ ಜಾರಿಕೊಳ್ಳುವವರನ್ನು ಸಂಘದಿಂದ ಹೊರಹಾಕಿಬಿಡಬೇಕು; ಸಂಘಕ್ಕೆ ಹಾನಿಯನ್ನುಂಟು ಮಾಡಬಯಸುವವನನ್ನು ದೂಷಿಸಲ್ಪಟ್ಟ ಅಪರಾಧಿಯೆಂದು ಬಗೆದು ಅವನ ಕೂಡ ವ್ಯವಹರಿಸಬೇಕು, ಎಂದು ಮುಂತಾಗಿ ಕೌಟಿಲ್ಯನು ನಿಯಮಗಳನ್ನು ವಿಧಿಸಿದ್ದಾನೆ.

ಬೌದ್ಧ ಜಾತಕ ಕತೆಗಳಲ್ಲಿ ಹದಿನೆಂಟು ಜಾತಿಗಳಿಗೆ ಸಂಬಂಧಿಸಿದ ಸಂಘಟನೆಗಳ ಉಲ್ಲೇಖಗಳಿವೆ. ಈ ಉಲ್ಲೇಖ ಗಳಿಂದ ಬೌದ್ಧ ಜಾತಕ ಕತೆಗಳು ಬರೆಯಲ್ಪಡುವ ಸಮಯ ಕ್ಕಾಗಲೇ ಇಂತಹ ಸಂಘಟನೆಗಳು ದಿನಬಳಕೆಯ ಮಾತಾಗಿದ್ದ ವೆಂಬುದು ಸ್ಪಷ್ಟವಾಗುತ್ತದೆ. ಎರಡು ಜಾತಕ ಕತೆಗಳ ಮೇರೆಗೆ ರಾಜಮೆರವಣಿಗೆಯ ಸಂದರ್ಭದಲ್ಲಿ ಹದಿನೆಂಟು ಜಾತಿಗಳ

ಸಂಘಟನೆಗಳು ಪ್ರಾತಿನಿಧ್ಯ ಹೊಂದಿರುತ್ತಿದ್ದವು. ರಾಜಮೆರವಣಿಗೆಯಂತಹ ಮಹತ್ವದ ಪ್ರಸಂಗಗಳಲ್ಲಿ ಕುಶಲಕರ್ಮಿಗಳ ಸಂಘ ಸಂಸ್ಥೆಗಳಿಗೆ ಪ್ರಾತಿನಿಧ್ಯ ಸಿಕ್ಕುತ್ತಿದ್ದಿತೆನ್ನುವ ಆಧಾರದ ಮೇಲಿಂದ ಪ್ರಾಚೀನ ಭಾರತದ ಆಡಳಿತದಲ್ಲಿ ಅವು ವಹಿಸುತ್ತಿದ್ದ ಮಹತ್ವದ ಪಾತ್ರದ ಕಲ್ಪನೆ ನಮಗಾಗುತ್ತದೆ.

ಮನುಸ್ಮೃತಿ ಹಾಗೂ ಯಾಜ್ಞವಲ್ಕ್ಯ ಸ್ಮೃತಿಗಳಲ್ಲಿ ಶ್ರಮಜೀವಿಗಳ ಸಂಘ ಸಂಸ್ಥೆಗಳ ರಕ್ಷಣೆಗಾಗಿ ವಿಧಿಸಿರುವ ನಿಯಮಗಳಿಂದಲೂ ಕ್ರಿಸ್ತ ಶಕಾರಂಭದಿಂದೀಚೆಗೆ ಅವು ಆಡಳಿತ ವ್ಯವಸ್ಥೆಯಲ್ಲಿನ ಮಹತ್ವದ ಅಂಗಗಳಾಗಿದ್ದವೆನ್ನುವದು ವ್ಯಕ್ತವಾಗುತ್ತದೆ. ತತ್ಪರಿಣಾಮವಾಗಿ ಈ ತೆರನ ಸಂಘಗಳಲ್ಲಿ ಜನತೆಯ ವಿಶ್ವಾಸ ಬೆಳೆಯುತ್ತ ಹೋಯಿತು. ಸಾರ್ವಜನಿಕ ಕಾರ್ಯಗಳಿಗಾಗಿ ಇವು ಅತ್ಯಂತ ನಂಬಲರ್ಹ ವಿಶ್ವಸ್ಥನಿಧಿಗಳೆಂಬ ಭಾವನೆ ಜನತೆಯಲ್ಲಿ ಮೂಡಿತು. ಕ್ರಿ. ಶ. ಎರಡು, ಮೂರನೆಯ ಶತಮಾನದ ಹಲವಾರು ಶಿಲಾಶಾಸನಗಳಲ್ಲಿ ಜನರು ಶ್ರಮಜೀವಿಗಳ ಸಂಘ ಸಂಸ್ಥೆಗಳಲ್ಲಿ ಹಣವನ್ನು ಇಟ್ಟು ಅವು ವಿಶ್ವಸ್ಥನಿಧಿಗಳ ರೀತಿಯಲ್ಲಿ ಕಾರ್ಯಶೀಲವಾಗಬಯಸಿದ ಉದಾಹರಣೆಗಳಿವೆ. ನಾಸಿಕ ಗುಹೆಯಲ್ಲಿನ ಶಿಲಾಶಾಸನವೊಂದು, ನಹಪಾನ ಅರಸನ ಅಳಿಯನಾದ ಉಷವದಾತನು, ಆ ಗುಹೆಯಲ್ಲಿ ವಿರಮಿಸುತ್ತಿದ್ದ ಬೌದ್ಧ ಬಿಕ್ಷುಗಳ ಪ್ರಯೋಜನಾರ್ಥ ಗೋವರ್ಧನದಲ್ಲಿನ ನೇಕಾರರ ಎರಡು ಸಂಘಗಳಲ್ಲಿ, ಒಂದರಲ್ಲಿ ೨೦೦೦ ಕಾರ್ಷಾಪಣಗಳನ್ನೂ, ಇನ್ನೊಂದರಲ್ಲಿ ೧೦೦೦ ಕಾರ್ಷಾಪಣಗಳನ್ನೂ ನಿಧಿಯ ರೂಪದಲ್ಲಿ ಇರಿಸಿದ ವಿಷಯವನ್ನು ತಿಳಿಸುತ್ತದೆ.

ಅದೇ ರೀತಿಯಾಗಿ, ನಾಸಿಕದಲ್ಲಿನ ಇನ್ನೊಂದು ಶಿಲಾಶಾಸನದಲ್ಲಿ ಗೋವರ್ಧನದಲ್ಲಿನ ಕುಂಬಾರರ ಸಂಘದಲ್ಲಿ ೧೦೦೦ ಕಾರ್ಷಾಪಣಗಳನ್ನೂ, ನೀರೆತ್ತುವವರ ಸಂಘದಲ್ಲಿ ೨೦೦೦ ಕಾರ್ಷಾಪಣಗಳನ್ನೂ ನಿಧಿಯಾಗಿ ಇಟ್ಟ ವಿಷಯದ ಉಲ್ಲೇಖವಿದೆ. ಮೇಲಿನ ಎರಡು ಶಿಲಾಶಾಸನಗಳ ಅಧ್ಯಯನದಿಂದ ಶ್ರಮಜೀವಿಗಳ ಸಂಘಗಳು ವಿಶ್ವಸ್ಥ ನಿಧಿಗಳಂತೆಯೂ, ಬ್ಯಾಂಕುಗಳಂತೆಯೂ ಕಾರ್ಯಮಾಡುತ್ತಿದ್ದಂತೆ ತೋರುತ್ತದೆ.

ಶ್ರಮ ಜೀವಿಗಳ ಸಂಘ ಸಂಸ್ಥೆಗಳು ಸ್ಥಾನಿಕ ಆಡಳಿತದಲ್ಲಿಯೂ, ಸ್ಥಾನಿಕ ನ್ಯಾಯಾಲಯಗಳ ರೂಪದಲ್ಲಿಯೂ, ಮಂದಿರಗಳ ನಿರ್ಮಾಣ, ರಕ್ಷಣೆಯ ಹೊಣೆ ಹೊತ್ತುಕೊಂಡು ಧಾರ್ಮಿಕ ಕ್ಷೇತ್ರದಲ್ಲಿಯೂ ಮಹತ್ವದ ಪಾತ್ರವನ್ನಾಡುತ್ತ ಬಂದಿವೆ. ಬೃಹಸ್ಪತಿ ಸಂಹಿತದಲ್ಲಿ ಶ್ರಮಜೀವಿಗಳ ಸಂಘ-ಸಂಸ್ಥೆಗಳ ವಿಶಾಲವಾದ ಕಾರ್ಯಕ್ಷೇತ್ರದ ವಿವರಣೆಯಿದೆ. ಊರಿನಲ್ಲಿ ಸಭಾಭವನದ ರಚನೆ, ಪ್ರವಾಸಿಕರಿಗೆ ನೀರಿನ ಪೂರೈಕೆ ನಗರ ಸೌಂದರ್ಯ ವರ್ಧನೆಗೆ ಹೂದೋಟಗಳ ರಚನೆ ಹಾಗೂ ಪಾಲನೆ, ಊರಲ್ಲಿ ಬಾವಿ, ಕೆರೆಗಳ ನಿರ್ಮಾಣ ಮುಂತಾದವು ಶ್ರಮಜೀವಿಗಳ ಸಂಘಟನೆಗಳ ಕಾರ್ಯಗಳಾಗಿದ್ದವು. ಅಲ್ಲದೆ ಧಾರ್ಮಿಕ ಸಂಸ್ಕಾರಗಳನ್ನು ಮಾಡಲಸಮರ್ಥರಾದ ಬಡ ಜನರಿಗೆ ಆ ದಿಶೆಯಲ್ಲಿ ಸಹಾಯ ಮಾಡುವುದೂ ಇಂತಹ ಸಂಘಟನೆಗಳ ಕರ್ತವ್ಯವಾಗಿದ್ದಿತು.

ಬೃಹಸ್ಪತಿ ಸಂಹಿತದಲ್ಲಿ ತತ್ಕಾಲೀನ ನ್ಯಾಯ ವಿಧಾನದ ನಾಲ್ಕು ಹಂತಗಳಲ್ಲಿ ಶ್ರಮಜೀವಿಗಳ ಸಂಘಟನೆಗಳು ಎರಡನೆಯ

ಹಂತವಾಗಿದ್ದುದರ ವಿವರಣೆಯಿದೆ. ಗುಪ್ತ ಅರಸನಾದ ಕುಮಾರಗುಪ್ತನ ಕಾಲದ (ಕ್ರಿ. ಶಕ. ೪೩೩) ದಾಮೋದರಪುರ ತಾಮ್ರ ಪಟಗಳಲ್ಲಿ ಶ್ರಮಜೀವಿಗಳ ಸಂಘಟನೆಗಳು ನ್ಯಾಯಾಲಯಗಳಲ್ಲಿ ಹಾಗೂ ನ್ಯಾಯನಿರ್ಣಯದಲ್ಲಿ ವಹಿಸಿದ ಪಾತ್ರದ ಉಲ್ಲೇಖವಿದೆ.

ಶ್ರಮಜೀವಿಗಳ ಸಂಘ ಸಂಸ್ಥೆಗಳು ಕೇವಲ ತಮ್ಮ ಸದಸ್ಯರ ಹಿತಾಸಕ್ತಿಗಳ ಕಡೆಗೆ ಮಾತ್ರ ಗಮನವೀಯದೆ, ಸಕಲ ಸಮಾಜದ ಆಶೋತ್ತರಗಳನ್ನು ಈಡೇರಿಸುವಲ್ಲಿಯೂ ತುಂಬ ಸಹಾಯಕವಾಗಿದ್ದವು. ಮಂದಿರಗಳ ನಿರ್ಮಾಣ, ಮಂದಿರಗಳ ವಿಶ್ವಸ್ಥನಿಧಿಗಳಾಗಿ ಅವುಗಳ ಸುವ್ಯವಸ್ಥೆಯನ್ನು ಕಾಪಾಡುವುದು, ಮಂದಿರಗಳಿಗೆ ದಾನಕೊಡುವುದು, ಮಂದಿರಗಳ ಜೀರ್ಣೋದ್ಧಾರ ಮುಂತಾಗಿ ಧಾರ್ಮಿಕ ವಿಷಯಗಳಲ್ಲಿಯೂ ಇಂತಹ ಸಂಘಗಳ ಪಾತ್ರ ಮಹತ್ವದ್ದಾಗಿದ್ದಿತು. ಕುಮಾರಗುಪ್ತನ ಕಾಲದ ಮಂಡಸೂರಿನ ಶಿಲಾಶಾಸನವು, ದಶಪುರದ ರೇಶಿಮೆ ನೇಕಾರರ ಸಂಘವು ಕ್ರಿ. ಶ. ೪೩೬ ರಲ್ಲಿ ಸೂರ್ಯದೇವನಿಗಾಗಿ ಗುಡಿಯನ್ನು ಕಟ್ಟಿಸಿದುದನ್ನು ತಿಳಿಸುತ್ತದೆ. ಮುಂದೆ ಕ್ರಿ. ಶ. ೪೭೩ ರಲ್ಲಿ ಅದೇ ಸಂಘವು ಆ ಗುಡಿಯ ಜೀರ್ಣೋದ್ಧಾರ ಕಾರ್ಯ ಕೈಕೊಂಡಂತೆಯೂ ತಿಳಿದುಬರುತ್ತದೆ.

ಇಷ್ಟಲ್ಲದೆ, ಶ್ರಮಜೀವಿಗಳ ಸಂಘಸಂಸ್ಥೆಗಳು ಆಯಾ ಉದ್ಯೋಗದಲ್ಲಿ ಬಾಲಕರನ್ನು ಪರಿಣತರನ್ನಾಗಿ ಮಾಡುವ ಕಾರ್ಯವನ್ನೂ, ಮತ್ತು ಆಯಾ ಉದ್ಯೋಗಗಳ ಉತ್ಪಾದನೆಯ

ಮಟ್ಟ ಕೆಡದಂತೆ ನೋಡಿಕೊಳ್ಳುವ ಕಾರ್ಯವನ್ನೂ ನಿರ್ವಹಿಸುತ್ತಿದ್ದವು.

ಕರ್ನಾಟಕದಲ್ಲಿಯೂ ಶ್ರಮಜೀವಿಗಳು ತಮ್ಮವೇ ಆದ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವಲ್ಲಿ ಯಶಸ್ವಿಯಾದ ಬಗೆಗೂ, ಸಮಾಜದಲ್ಲಿ ಗಣ್ಯಸ್ಥಾನವನ್ನು ಹೊಂದಿದ ಬಗೆಗೂ ಶಿಲಾಶಾಸನಗಳಲ್ಲಿ ಸಾಕಷ್ಟು ಉಲ್ಲೇಖಗಳಿವೆ; ಸಾಮಾನ್ಯವಾಗಿ ಇಂತಹ ಸಂಘಟನೆಗಳಿಗೆ 'ಹಿಟ್ಟು' ಎಂದು ಕರೆಯುವುದು ರೂಢಿ. ಕನ್ನಡನಾಡಿನ ಶಿಲಾಶಾಸನಗಳಲ್ಲಿ, 'ಎಂಟು ಹಿಟ್ಟು' 'ಹನ್ನೆರಡು ಹಿಟ್ಟು' ಗಳು ಸಮಾಜದಲ್ಲಿ ಆಡಿದ ಮಹತ್ವದ ಪಾತ್ರದ ಉಲ್ಲೇಖಗಳೂ ಸಿಕ್ಕುತ್ತವೆ.

೧೦ ಸಮಾಜದಲ್ಲಿ ಶ್ರಮಜೀವಿಗಳ ಸ್ಥಾನಮಾನ

ಶ್ರಮಜೀವಿಗಳಿಗೆ ಸಂಬಂಧಿಸಿದಂತೆ, ಪ್ರಾಚೀನಕಾಲದಲ್ಲಿನ ದಾಸ್ಯ ಪದ್ಧತಿ, ವೇತನ ಪದ್ಧತಿ, ಶ್ರಮಗೌರವ, ಜಾತಿ ಪದ್ಧತಿ ಶ್ರಮಜೀವಿಗಳ ಸಂಘ ಸಂಸ್ಥೆಗಳನ್ನು ಕುರಿತು ತಿಳಿದುಕೊಂಡಾದ ನಂತರ ಸಮಾಜದಲ್ಲಿ ಅವರಿಗಿದ್ದ ಸ್ಥಾನವನ್ನು ನಿರ್ಧರಿಸುವುದು ಸುಲಭವಾಗುತ್ತದೆ. ಋಗ್ವೇದ ಕಾಲದಲ್ಲಿ ಆರ್ಥಿಕ, ಔದ್ಯೋಗಿಕ ಹಾಗೂ ತನ್ಮೂಲಕ ಸಾಮಾಜಿಕ ಸ್ವರೂಪವಿನ್ನೂ ಸಂಕೀರ್ಣ ವಾಗಿ ರೂಪುಗೊಂಡಿರಲಿಲ್ಲವಾದುದರಿಂದ ಶ್ರಮಜೀವನವು ತನ್ನ ಸಾಮಾಜಿಕ ಮನ್ನಣೆಯನ್ನು ಕಳೆದುಕೊಂಡಿರಲಿಲ್ಲ. ಸಾಮಾನ್ಯ ವಾಗಿ ಆಗ ಸಕಲರೂ ಶ್ರಮಜೀವನದಲ್ಲಿ ತೊಡಗಬೇಕಾಗಿದ್ದಿತು. ಸದುದ್ದೇಶಪೂರಿತವಾದುದಾದರೂ ಶೋಷಣೆಗೆ ಅವಕಾಶ ನೀಡಿದ ಚಾತುರ್ವರ್ಣ್ಯ ಪದ್ಧತಿಯ ಬೀಜಗಳಿನ್ನೂ ಆಗ ತಾನೆ ಮೊಳೆಯಲಾರಂಭಿಸಿದ್ದವು. ಆದರೂ ದಸ್ಯುಗಳ ಸ್ಥಿತಿ ಮಾತ್ರ ತೀರ ಚಿಂತಾಜನಕವಾಗಿದ್ದಿತು. ಅವರನ್ನು ಬಹು ಪ್ರಾಚೀನ ಕಾಲದಿಂದಲೇ ಅಸ್ಪೃಶ್ಯರೆಂದು ಗಣಿಸಲಾಗುತ್ತಿದ್ದಿತು. ಅವರಿ ಗಾಗಿಯೇ ಸ್ವತಂತ್ರ ವಸತಿಯ ವ್ಯವಸ್ಥೆ ಮಾಡಲಾಗಿದ್ದಿತು. ಅವರಿಗೆ ಧಾರ್ಮಿಕ ವಿಧಿ ವಿಧಾನಗಳಲ್ಲಾಗಲಿ, ಶೈಕ್ಷಣಿಕ ವಿಷಯದಲ್ಲಾಗಲಿ ಉಳಿದವರೊಡನೆ ಸಮಾನ ಹಕ್ಕುಗಳಿರಲಿಲ್ಲ. ದಸ್ಯುಗಳೊಡನೆ ಶರೀರ ಸಂಬಂಧವೇರ್ಪಡುವುದು ಪಾಪವೆಂದು ತಿಳಿಯಲಾಗುತ್ತಿದ್ದಿತು. ಈ ರೀತಿಯ ಮಾನವತಾವಾದದಿಂದ

ಅತೀತವಾದ ವರ್ತನೆಗೆ ದಸ್ಯುಗಳು ತೊಡಗಿರುತ್ತಿದ್ದ ಕಾರ್ಯ ಸ್ವರೂಪವೇ ಕಾರಣವಾಗಿದ್ದಿತಲ್ಲದೆ, ಬೇರಾವ ಸೈದ್ಧಾಂತಿಕ ತಳಹದಿಯಿರಲಿಲ್ಲ.

ವೇದೋತ್ತರ ಕಾಲದಲ್ಲಿ, ವರ್ಣ ವ್ಯವಸ್ಥೆಯ ಬೀಜಗಳು ಸಮಾಜದಲ್ಲಿ ಆಳವಾಗಿ ಬೇರೂರುತ್ತ ಸಾಗಿದಂತೆಲ್ಲ, ಉದ್ಯೋಗ ಮೂಲವಾದ ಜಾತಿ ಉಪಜಾತಿಗಳ ಬೆಳವಣಿಗೆಯೊಂದಿಗೆ, ಹಿಂದೂ ಸಮಾಜ ಹೆಚ್ಚು ಹೆಚ್ಚು ಸಂಕೀರ್ಣವಾಗುತ್ತ ಸಾಗಿತು. ಜಾತಿ ಜಾತಿಗಳಲ್ಲಿಯೇ ಸಾಮಾಜಿಕ ಮೇಲು-ಕೀಳು ಭಾವನೆ ಗಾರಂಭವಾಯಿತು. ಆದರೂ ಶ್ರಮಜೀವಿಗಳನ್ನು ಇಡಿಯಾಗಿ ಗಮನದಲ್ಲಿ ತೆಗೆದುಕೊಂಡರೆ, ಅವುಗಳಲ್ಲಿ ಅನೇಕ ಉದ್ಯೋಗ ದವರನ್ನು ವೈಶ್ಯ ಪಂಗಡದಲ್ಲಿ ಗಣಿಸಲಾಗುತ್ತಿದ್ದಿತು. ಬ್ರಾಹ್ಮಣ ಹಾಗೂ ಕ್ಷತ್ರಿಯರು ವೈಶ್ಯರನ್ನು ಸಮಾನ ದರ್ಜೆಯವರೆಂದು ತಿಳಿಯುತ್ತಿರಲಿಲ್ಲ. ಅಲ್ಲದೆ, ಆರ್ಥಿಕ ಸ್ಥಿತಿಗತಿ, ತಮ್ಮವೇ ಆದ ಶ್ರೇಣಿಗಳ ಸಂಘಟನೆ, ಔದ್ಯೋಗಿಕ ಸ್ವರೂಪಗಳೂ ಸಮಾಜದಲ್ಲಿ ಒಂದು ಜಾತಿಯವರ ಸ್ಥಾನಮಾನವನ್ನು ನಿರ್ಧರಿಸುವ ಮಹತ್ವದ ಅಂಶಗಳಾಗಿದ್ದವು. ಗುಲಾಮರಾಗಿ ಜೀವಿಸುತ್ತಿದ್ದವರ ಹಾಗೂ ಒತ್ತಾಯದ ದುಡಿಮೆಗೊಳಗಾದವರ ಆರ್ಥಿಕ ಸ್ಥಿತಿಗತಿ ಚಿಂತಾಜನಕವಾಗಿದ್ದವು. ಅವರಿಗೆ ಶ್ರೇಣಿ ಗಳನ್ನು ಸಂಘಟಿಸಿಕೊಳ್ಳುವ ಪ್ರಗತಿಪರ ವಿಚಾರವೂ ಇರಲಿಲ್ಲ. ಹೀಗಾಗಿ ಅವರು ಸಮಾಜದ ತೀರ ಹಿಂದುಳಿದ ಪಂಗಡದವ ರಾಗಿದ್ದರು. ತಮ್ಮ ಮನೆಗಳಲ್ಲಿಯೇ, ತಮ್ಮವೇ ಆದ ಶಾಲೆ ಗಳನ್ನು ಸ್ಥಾಪಿಸಿಕೊಂಡು ಕಾರ್ಯನಿರತರಾದ ಶ್ರಮಜೀವಿಗಳ

ಆರ್ಥಿಕ ಸ್ಥಿತಿಗತಿ ಉಳಿದವರಿಗಿಂತಲೂ ಉತ್ತಮವಾಗಿದ್ದಿತು. ಅವರು ತಮ್ಮವೇ ಆದ ಶ್ರೇಣಿಗಳನ್ನು ಸಂಘಟಿಸಿಕೊಂಡಿದ್ದರು. ಹೀಗಾಗಿ ಸಮಾಜದಲ್ಲಿ ಅವರಿಗೆ ವಿಶೇಷ ಮಾನಮರ್ಯಾದೆ ಗಳಿದ್ದವು. ಸಮಾಜದಲ್ಲಿ, ತತ್ಕಾಲೀನ ಆಡಳಿತದಲ್ಲಿ ಹಾಗೂ ಧಾರ್ಮಿಕ ಕ್ಷೇತ್ರದಲ್ಲಿ ಶ್ರಮಜೀವಿಗಳಿಗೆ ಗಮನಾರ್ಹವಾದ ಉನ್ನತಸ್ಥಾನವನ್ನು ದೊರಕಿಸಿಕೊಡುವಲ್ಲಿ, ಆಧುನಿಕ ಕಾಲದ Trade union ಗಳಿಗೆ ಸಮಾನವಾದ ಶ್ರಮಜೀವಿಗಳ ಸಂಘಟನೆಗಳು ಮಹತ್ವದ ಪಾತ್ರವಾಡುತ್ತ ಬಂದಿವೆ.

ಶ್ರಮಜೀವಿಗಳ ಸಂಘಟನೆಗಳಿಂದಾಗಿ, ಅವರ ಆರ್ಥಿಕ ಸ್ಥಿತಿ, ಸಾಮಾಜಿಕ ಉನ್ನತಿಗಳಲ್ಲಿ ಪ್ರಗತಿಯಾಯಿತಾದರೂ, ಶೈಕ್ಷಣಿಕ ಅವಕಾಶಗಳನ್ನು ಮಾತ್ರ ಅವರಿಗೆ ನಿರಾಕರಿಸ ಲಾಯಿತು. ತತ್ಕಾರಣದಿಂದ, ಕೆಲವೊಂದು ಕಲೆ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ಕಾಣಿಕೆ ಸಲ್ಲಿಸಲು ಶ್ರಮಜೀವಿಗಳಿಗೆ ಅವಕಾಶ ಸಿಕ್ಕದೆ ಹೋಯಿತು. ಆ ದೃಷ್ಟಿಯಿಂದ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ವ್ಯವಸ್ಥೆಗಳು ಪರಸ್ಪರ ಹೆಣೆದುಕೊಂಡಿದ್ದ ಪ್ರಾಚೀನ ಕಾಲದಲ್ಲಿ, ಶ್ರಮಜೀವಿಗಳು ಆರ್ಥಿಕ ಶೋಷಣೆಗಲ್ಲ ವಾದರೂ ಸಾಮಾಜಿಕ ಶೋಷಣೆಗೆ ಒಳಗಾಗಿದ್ದರೆಂಬುವರಲ್ಲಿ ಸಂದೇಹವಿಲ್ಲ.

೧೧ ಮುಕ್ತಾಯ

ಕಾಲಗತಿಸಿದಂತೆಲ್ಲ ಶ್ರಮಜೀವಿಗಳ ವಿಷಯಕವಾಗಿ ಹೆಚ್ಚು ವಿಶಾಲವಾದ ಹಾಗೂ ಮಾನವೀಯವಾದ ಭಾವನೆಗಳು ಜನತೆಯಲ್ಲಿ ಬೆಳೆದುಕೊಂಡು ಬರುತ್ತಿರುವದು ಸಂತೋಷದ ಸಂಗತಿಯಾಗಿದೆ. ಈ ದಿಶೆಯಲ್ಲಿ ಭಾರತದಲ್ಲಿ ಬಸವಣ್ಣನವರೂ, ಗಾಂಧೀಜಿಯವರೂ, ಪಾಶ್ಚಿಮಾತ್ಯ ನಾಡಿನಲ್ಲಿ ಕಾರ್ಲಮಾರ್ಕ್ಸ ಮತ್ತು ಲೆನಿನ್‌ರಂತಹ ಪ್ರಗತಿಪರ ವಿಚಾರವಾದಿಗಳೂ ಜನತೆಯ ಹೃದಯದಲ್ಲಿ ಶ್ರಮಜೀವಿಗಳ ವಿಷಯಕವಾಗಿ ಉದಾತ್ತ ಭಾವನೆಯ ಬೀಜಗಳನ್ನು ಬಿತ್ತಿರುವುದಲ್ಲದೆ, ಶ್ರಮಗೌರವದ ಮಹತಿಯನ್ನು ಜನತೆಗೆ ಬಿಂಬಿಸಿಕೊಟ್ಟಿದ್ದಾರೆ.

ಕಾಯಕವೇ ಕೈಲಾಸವೆಂದುಸುರಿ, ಶ್ರಮವಹಿಸಿ ದುಡಿಯದೆ ಮಾನವನಿಗೆ ಜೀವಿಸಲಿಕ್ಕೆ ಅಧಿಕಾರವಿಲ್ಲೆಂದು ಬಸವಣ್ಣನವರು ಸಾರಿದರು. ತಮ್ಮ ಕಾಯಕದ ಕಲ್ಪನೆಯ ಮೂಲಕ ಶ್ರಮಸಾಧ್ಯ ಕಾರ್ಯಗಳ ವಿಷಯಕವಾಗಿ ಪೂಜ್ಯಭಾವನೆ ಬೆಳೆದುಕೊಂಡು ಬರುವಂತೆ ಅವರು ಪ್ರಯತ್ನಿಸಿದರು. ಉದ್ಯೋಗಮೂಲವಾದ ಜಾತಿ ಪದ್ಧತಿಯನ್ನು ಅಲ್ಲಗಳೆದು ತನ್ಮೂಲಕ ಉದ್ಭವಿಸಿದ ಮೇಲು ಕೀಳು ಭಾವನೆಗಳನ್ನು ನಿವಾರಿಸಲೆತ್ನಿಸಿದರು. ಆದ್ಯ ಮಾನತಾವಾದಿಯಾಗಿದ್ದ ಬಸವಣ್ಣನವರು ಈ ರೀತಿ ಶ್ರಮಜೀವನದ ಬಗೆಗೆ ಜನತೆಯಲ್ಲಿ ಆದರವೂ ಪೂಜ್ಯಭಾವನೆಯೂ

ಬೆಳೆದುಕೊಂಡು ಬರುವಂತೆ ಪ್ರಯತ್ನಿಸಿ ಸಮಾಜದಲ್ಲಿ ಅವರಿಗೆ ಸರ್ವಸಮಾನ ಸ್ಥಾನ ಸಿಕ್ಕಲು ಕಾರಣೀಭೂತರಾದರು. ಬಸವಣ್ಣನವರುಸುರಿದ ಭಾಷೆಯ ಪರಿಮಿತ ವ್ಯಾಪ್ತಿಯಿಂದಾಗಿ ಅವರ ತತ್ವಗಳಿಗೆ ಜಾಗತಿಕ ಮನ್ನಣೆ ಸಿಕ್ಕಲು ಸಮಯ ಬೇಕಲ್ಲದೆ, ಅವರ ಕಾಯಕದ ಕಲ್ಪನೆಯಲ್ಲಿ ತ್ರಿಕಾಲಾಬಾಧಿತ ಸತ್ಯವಡಗಿದೆ ಎಂಬುದರಲ್ಲಿ ಸಂಶಯವಿಲ್ಲ.

ಯುರೋಪ ಖಂಡದಲ್ಲಿ ತಲೆದೋರಿದ ಔದ್ಯೋಗಿಕ ಕ್ರಾಂತಿ ಆರಂಭದಲ್ಲಿ ನಿರುದ್ಯೋಗ ಸಮಸ್ಯೆಯನ್ನು ನಿರ್ಮಿಸುವ ಮೂಲಕ ಶ್ರಮಜೀವಿಗಳ ಕಷ್ಟಪರಂಪರೆಗೆ ಕಾರಣವಾಯಿತಾದರೂ, ಅನಂತರ, ಕಾರ್ಲಮಾರ್ಕ್ಸನ ತತ್ವಸರಣಿಗೆ ಪ್ರೇರಣೆಯನ್ನಿತ್ತು ಒಂದು ದೃಷ್ಟಿಯಿಂದ ಮಾನವಕುಲಕ್ಕೆ ವರದಾನವಾಗಿ ಪರಿಣಮಿಸಿತೆಂದೇ ಹೇಳಬೇಕು.

ಮೂಲತಃ ವ್ಯಕ್ತಿಗತವಾಗಿದ್ದ ಮಾನವ ಶ್ರಮಕ್ಕೆ ಔದ್ಯೋಗಿಕ ಕ್ರಾಂತಿಯ ನಂತರ ಸಾಮಾಜಿಕ ಸ್ವರೂಪ ಬಂದಿತು. ಉತ್ಪಾದನಾ ರಂಗದಲ್ಲಿ ಮುಂಚೆ ಗೌಣ ಸ್ಥಾನವನ್ನು ಹೊಂದಿದ್ದ ಶ್ರಮವು ಔದ್ಯೋಗಿಕ ಕ್ರಾಂತಿಯ ನಂತರ ಉತ್ಪಾದನೆಯ ಮಹತ್ವದ ಘಟಕವಾಗಿ ಪರಿಣಮಿಸಿತು. ಕಾಲಾನುಕ್ರಮದಲ್ಲಿ ಉತ್ಪಾದನೆಯ ಎರಡು ಮಹತ್ವದ ಘಟಕಗಳಾದ ಬಂಡವಾಳ ಹಾಗೂ ಶ್ರಮ ಇವುಗಳ ನಡುವೆ ತೀಕ್ಷ್ಣ ಸಂಘರ್ಷಕ್ಕಾರಂಭವಾಯಿತು. ಆರಂಭದಲ್ಲಿ ಬಂಡವಾಳದ ಕೈ ಮೇಲಾಗಿ ಮಾನವ ಶ್ರಮದ ಶೋಷಣೆಗೆ ಮೊದಲಾಯಿತು.

ಔದ್ಯೋಗಿಕವಾಗಿ ಮುಂದುವರಿದ ರಾಷ್ಟ್ರಗಳಲ್ಲೆಲ್ಲ ಬಂಡವಾಳ ವಾದೀ ಸಮಾಜ ನಿರ್ಮಾಣವಾಯಿತಲ್ಲದೆ, ಅಂತಹ ಸಮಾಜದ ಶಿಶುವಾಗಿ ಬಂಡವಾಳವಾದೀ ಸರಕಾರಗಳ ಸ್ಥಾಪನೆಯಾಯಿತು. ಇಂತಹ ಸನ್ನಿವೇಶದಲ್ಲಿ ಐತಿಹಾಸಿಕ ಘಟನೆಗಳನ್ನು ಭೌತಿಕ ದೃಷ್ಟಿಯಿಂದ ವಿಶ್ಲೇಷಿಸಿದ 'ಕಾರ್ಲಮಾರ್ಕ್ಸ' ಎಂಬ ಜರ್ಮನ್ ಪಂಡಿತನು ಮಾನವ ಶ್ರಮಕ್ಕೆ ಸಂಬಂಧಿಸಿದ ಮಹತ್ಕ್ರಾಂತಿಕಾರಕ ಸಿದ್ಧಾಂತವನ್ನು ಮಂಡಿಸಿ ವಿಚಾರ ಪ್ರಪಂಚವನ್ನು ಅಲ್ಲೋಲ ಕಲ್ಲೋಲಗೊಳಿಸಿದನು. ಮಾನವ ಶ್ರಮದ ಮಹತ್ವವನ್ನು ಎತ್ತಿ ಹೇಳಿ ಶ್ರಮಜೀವಿಗಳ ಸಂಘಟನಾತ್ಮಕ ಜೀವನದಲ್ಲಡಗಿದ ಪ್ರಚಂಡ ಶಕ್ತಿಯನ್ನಾತನು ಮಾನವಕುಲಕ್ಕೆ ಬಿಂಬಿಸಿ ಕೊಟ್ಟನು.

ಬಹುಕಾಲದ ವರೆಗೆ ಜಗತ್ತು ಮಾರ್ಕ್ಸವಾದದ ಪ್ರಾಯೋಗಿಕತೆಯನ್ನು ಪ್ರಶ್ನಿಸುತ್ತಿದ್ದಾಗ, ಪ್ರಥಮ ಬಾರಿಗೆ ಆ ಸಿದ್ಧಾಂತವನ್ನು ಕಾರ್ಯಾನುಷ್ಠಾನಕ್ಕೆ ತರುವ ಮೂಲಕ ಅದು ಕೇವಲ ವೈಚಾರಿಕ ಸಿದ್ಧಾಂತವಲ್ಲ, ಪ್ರಾಯೋಗಿಕ ಸಿದ್ಧಾಂತವೆಂಬುದನ್ನು ಮಾನವ ಜನಾಂಗಕ್ಕೆ ತೋರಿಸಿಕೊಟ್ಟ ಶ್ರೇಯಸ್ಸು ರಶಿಯದ ಕ್ರಾಂತಿಯ ಸೂತ್ರಧಾರ ಶಕ್ತಿಯಾಗಿದ್ದ ಲೆನಿನ್ ಮಹಾಶಯನಿಗೆ ಸಲ್ಲಬೇಕು. ರಶಿಯದಲ್ಲಿ ಮಾರ್ಕ್ಸ ವಾದಕ್ಕೆ ದೊರೆತ ಯಶಸ್ಸು ಜಗತ್ತಿನ ಅನೇಕ ರಾಷ್ಟ್ರಗಳನ್ನು ಆ ದಿಶೆಯಲ್ಲಿ ಪ್ರಚೋದಿಸಿದೆ. ಪೂರ್ವ ಯುರೋಪದ ಅನೇಕ ರಾಷ್ಟ್ರಗಳು, ಕ್ಯೂಬಾ ಹಾಗೂ ಚೀನಾ ಇಂದು ಮಾರ್ಕ್ಸ ವಾದವನ್ನು ಆಡಳಿತಾತ್ಮಕ ರೀತಿಯಲ್ಲಿ ಅನುಷ್ಠಾನಗೊಳಿಸಿದ

ಆದ್ಯ ರಾಷ್ಟ್ರಗಳಾಗಿವೆ. ಈಗ ಶ್ರಮಜೀವಿಗಳು ಶೋಷಿತವರ್ಗ ವಾಗಿ ಉಳಿದಿಲ್ಲ ಮಾತ್ರವಲ್ಲ, ಜಗತ್ತಿನಲ್ಲಿ ಒಂದು ಬಲಾಢ್ಯ ಮಾನವ ಶಕ್ತಿಯಾಗಿ ರೂಪುಗೊಂಡಿದ್ದಾರೆ.

ಭಾರತದಲ್ಲಿ ಔದ್ಯೋಗಿಕ ಕ್ರಾಂತಿಗಾರಂಭವಾದುದು ತೀರ ಇತ್ತೀಚೆಗೆ. ಯುರೋಪದಲ್ಲಿ ತಲೆದೋರಿದ ಬಂಡವಾಳ ಹಾಗೂ ಮಾನವಶ್ರಮಗಳ ನಡುವಿನ ಸಂಘರ್ಷದ ಬೆಳಕಿನಲ್ಲಿ ಮಹಾತ್ಮಾ ಗಾಂಧೀಜಿಯವರು, ಶೋಷಣೆಗೆ ಅವಕಾಶ ಸಿಕ್ಕದ ರೀತಿಯಲ್ಲಿ ಭಾರತದಲ್ಲಿ ಔದ್ಯೋಗಿಕ ಪ್ರಗತಿಯಾಗಬೇಕೆಂದು ಆರಂಭ ದಿಂದಲೂ ವಾದಿಸಿದ್ದಾರೆ. ಕಾರ್ಲಮಾರ್ಕ್ಸ್‌ನ ತತ್ವಗಳನ್ನು ಅಹಿಂಸಾತ್ಮಕ ರೀತಿಯಿಂದ ಅನುಷ್ಠಾನಕ್ಕೆ ತಂದು ಮಾನವ ಶ್ರಮಕ್ಕೆ ಸಲ್ಲಬೇಕಾದ ಅನ್ನತೆಯನ್ನು ದೊರಕಿಸಿಕೊಡಬೇಕೆಂದು ಪ್ರತಿಪಾದಿಸಿದ್ದಾರೆ. ಸ್ವಾತಂತ್ರ್ಯ ನಂತರ ಆ ದಿಶೆಯಲ್ಲಿ ಗಣ ನೀಯವಲ್ಲವಾದರೂ ಸಮಾಧಾನಕರ ಪ್ರಗತಿ ಸಾಧಿಸಲಾಗಿದೆ ಎಂಬುದರಲ್ಲಿ ಸಂಶಯವಿಲ್ಲ.

ಪ್ರಾಚೀನ ಭಾರತದಲ್ಲಿನ ಔದ್ಯೋಗಿಕ ಸ್ವರೂಪ ಮಾರ್ಕ್ಸ್ ವಾದದಂತಹ ಯಾವುದೇ ಸಿದ್ಧಾಂತದ ಪ್ರತಿಪಾದನೆಗೆ ಅವಕಾಶ ಕಲ್ಪಿಸಿಕೊಡುವಂತಹದು ಆಗಿರಲಿಲ್ಲ. ಆಗ ಮಾನವ ಶ್ರಮಕ್ಕೆ ಆಧುನಿಕ ಕಾಲದಲ್ಲಿಯಂತೆ ಸಾಮಾಜಿಕ ಸ್ವರೂಪ ಬಂದಿರಲಿಲ್ಲ. ಸಮಾಜದಲ್ಲಿ ಅತ್ಯಲ್ಪ ಶೋಷಣೆಗೆ ಮಾತ್ರ ಅವಕಾಶವಿದ್ದಿತು. ಆಧುನಿಕ ಕಾಲದಲ್ಲಿ Labour union ಗಳು ಆಡುತ್ತಿರುವ ಪಾತ್ರವನ್ನು ಪ್ರಾಚೀನ ಕಾಲದಲ್ಲಿ ಶ್ರಮಜೀವಿಗಳ ಸಂಘಸಂಸ್ಥೆ

ಗಳು ಆಡುತ್ತಿದ್ದವು.. ನಾಡಿನ ಆಡಳಿತದಲ್ಲಿ ಶ್ರಮಜೀವಿಗಳ ಸಂಘಸಂಸ್ಥೆಗಳಿಗೆ ಯೋಗ್ಯ ಪ್ರಾಶಸ್ತ್ಯ ಹಾಗೂ ಪ್ರಾತಿನಿಧ್ಯಗಳು ದೊರೆತಿದ್ದವು. ಹೀಗಾಗಿ ಆ ಕಾಲದ ವಾತಾವರಣ ಶ್ರಮಜೀವಿಗಳ ಸರ್ವಾಂಗೀಣವಲ್ಲನಾದರೂ ಬಹುಮುಖ ಪ್ರಗತಿಗೆ ಪೋಷಕವಾಗಿದ್ದಿತು.

ಆಧಾರ ಗ್ರಂಥಗಳು

1. History of Dharmasastra
(Vol II pt. i) by P. V. Kane
2. Vedic Index (Vols. I and II)
by Keith and Macdonell
3. India as Known to Panini
by V. S. Agravala
4 Kautilya's Arthasastra
by R. Samasastri
5. Corporate Life in Ancient
India. by R. C. Mujumadar
6. A History of Indian public Life
by U. N. Ghoshal
7. Early History of the Deccan
(Parts I-IV) Ed. by G. Yazdani
8. Ancient India as Described
by Megasthenes and Arrian
by J. W. Mc Crindle
9. The Economic Life of
Northern India. by Lallanji Gopal
10. Economic Life in Ancient
India By M. A. Buch
11. Local self Government in
Medieaval Karnataka
by Dr. G. S. Dikshit

೩೨ ಸಾರ್ವಜನಿಕ ಅಭಿಪ್ರಾಯ (ಎ.ಆ).-ಎಸ್.ರಾಜಗೋಪಾಲರಾವ್

೩೩ ಕನ್ನಡ ಕಾವ್ಯಗಳಲ್ಲಿ ಕಿರಾತಾರ್ಜುನ ಪ್ರಸಂಗ
-ದೇವೇಂದ್ರಕುಮಾರ ಹಕಾರಿ

೩೪ ಕನ್ನಡಕ್ಕೆ ಪುರಂದರದಾಸರು ನೀಡಿದ ಕೊಡುಗೆ (ಎ.ಆ.)
-ಜಿ. ಡಿ. ನಾಡಕರ್ಣಿ

೩೫ ಫ್ಯಾಶನ್ನುಗಳು (ಎ.ಆ.) -ಕೆ. ಡಿ. ತಂಗೋಡ

೩೬ ಮಹಾಕವಿ ರಾಘವಾಂಕನ ಪಾತ್ರಗಳಲ್ಲಿ
ತತ್ವನಿಷ್ಠೆ (ಎ.ಆ.) -ಬಿ. ವ್ಹಿ. ಮಲ್ಲಾಪುರ

೩೭ ಅಭಿವೃದ್ಧಿ ಯೋಜನೆಗಳಲ್ಲಿ ಸಹಕಾರದ ಪಾತ್ರ (ಎ.ಆ.)
-ಎಸ್. ಜಿ. ಕರಭಂಟನಾಳ

೩೮ ಕನ್ನಡ ಜೈನ ಪುರಾಣಗಳು (ಎ.ಆ.) -ಎಸ್. ಎನ್. ನಾಯಕ

೩೯ ಕನ್ನಡ ನಾಟ್ಯಸೃಷ್ಟಿ (ಎ.ಆ.) -ಎಚ್. ಜಿ. ಲೋಕೂರ

೪೦ ಹರಿಹರನು ಚಿತ್ರಿಸಿದ ಶಿವಶರಣೆಯರು (ಎ.ಆ.) -ಬಿ.ಬಿ.ಹೆಂಡಿ

೪೧ ನೀವು ಬಯಸುವ ಮಗು ಗಂಡೋ ?
ಹೆಣ್ಣೋ ? (ಎ.ಆ.) -ಕೆ. ಆರ್. ರಾಮಸ್ವಾಮಿ

೪೨ ಆಂಡಯ್ಯ -ಬಿ. ಎಸ್. ಕುಲಕರ್ಣಿ

೪೩ ಬೆಳವಲನಾಡಿನ ಬೆಳೆಗಳು -ಎಸ್. ಎ. ಹೊಸಮನಿ

೪೪ ಜಾನಪದ ಕಥೆಗಳು (ಎ.ಆ.) -ಎಲ್. ಆರ್. ಹೆಗಡೆ

೪೫ ಸುಧಾರಿಸಿದ ಬೇಸಾಯ (ಎ.ಆ.) -ಎ. ಸಿ. ಕಲ್ಯಾಣಿಮಠ

೪೬ ಕನ್ನಡನಾಡಿನ ಐತಿಹಾಸಿಕ ಮಹಾಪುರುಷರು (ಎ.ಆ.)
-ಬಿ. ಆರ್ ಗೋಪಾಲ

೪೭ ಗ್ರಂಥಾಲಯದ ಅಂತರಂಗ (ಎ.ಆ.) -ಎಸ್. ಆರ್. ಗುಂಜಾಳ

೪೮ ಸ್ತ್ರೀ ಮತ್ತು ಶಿಕ್ಷಣ (ಎ.ಆ.) —ವನಮಾಲಾ ಆಚಾರ್

೪೯ ಜಾಗತಿಕ ಸರಕಾರ -ಸಿ. ವೀರಬಸಣ್ಣ

೫೦ ಸಮುದಾಯ ಸಂಘಟನೆ -ಎಚ್. ಎಂ. ಮರುಳಸಿದ್ಧಯ್ಯ

೫೧ ಅಶೋಕನ ಧರ್ಮಶಾಸನಗಳು —ಶ್ರೀನಿವಾಸ ರಿತ್ತಿ

೫೨ ಪ್ರಾಚೀನ ಭಾರತದ ರಾಜ್ಯಪದ್ಧತಿ (ಎ.ಆ.)
-ಸಿ. ವ್ಹಿ. ರಂಗಸ್ವಾಮಿ

೫೩ ಅಕ್ಕಮಹಾದೇವಿ ಮತ್ತು ಮೀರಾಬಾಯಿ
-ಎಸ್. ಎಸ್. ಕಬ್ಬಿನ

೫೪ ಕನ್ನಡ ಕಾವ್ಯದಲ್ಲಿ ವೀರರಸ ನಿರೂಪಣೆ
-ಬಿ. ಬಿ. ಮಹೀಶವಾಡಿ

೫೫ ಹರಿಹರ ಮಹಾಕವಿಯ ಕೆಲವು ಮಹೋನ್ನತ ವಿಚಾರಗಳು
-ಬಿ. ಸಿ. ಜವಳಿ

೫೬ ಭಾರತ ರಾಜ್ಯಘಟನೆ (ಎ.ಆ.) -ಎಂ. ಎಸ್. ಪಾಟೀಲ

೫೭ ಪಂಚಾಯತಿ ರಾಜ್ಯ -ಎಸ್. ಜಿ. ಕರಭಂಟನಾಳ
ಮತ್ತು ಕೆ. ಡಿ. ಬಸವ

೫೮ ವಿಷಮಜ್ವರ (ಎ. ಆ.) -ಪಿ. ಎಸ್. ಶಂಕರ

೫೯ ಪುಸ್ತಕ ಭಾಂಡಾರ ಕಾಯಿದೆ -ಜಿ. ಎಂ. ಪಾಟೀಲ

೬೦ ಸರ್ ಐಸಾಕ್ ನ್ಯೂಟನ್ -ಆರ್. ವ್ಹಿ. ಅಬ್ಬಿಗೇರಿ

೬೧ ಗ್ರಾಮಾಭ್ಯುದಯದ ಯೋಜನಾಂಗಗಳು -ಟಿ. ಕೆ. ಮೇಟಿ

೬೨ ಹರಿಜನರ ಸಮಸ್ಯೆಗಳು ಹಾಗು ಅವುಗಳ ಪರಿಹಾರ -ಎನ್. ಕೆ. ಕಡೆತೋಟದ

೬೩ ರಾಸಾಯನಿಕ ಕಿಣ್ವಗಳು -ಎಂ. ಎಸ್. ಎಸ್. ರಾವ್

೬೪ ಪ್ರಜಾಪ್ರಭುತ್ವದ ಮೂಲತತ್ವಗಳು -ಕೆ. ಬಿ. ಬಕ್ಕಪ್ಪ

೬೫ ಹೃದಯಾಘಾತ -ಪಿ. ಎಸ್. ಶಂಕರ

೬೬ ಆಭರಣಗಳ ಬಗೆಗೆ ಸಾಮಾಜಿಕ ದೃಷ್ಟಿಕೋನ .ಡಿ. ಎ. ಚೆಕ್ಕಿ

೬೭ ಶ್ರೀ ರಾಮಾಯಣ ದರ್ಶನದಲ್ಲಿ ಕುವೆಂಪು ಸೃಜಿಸಿದ ಮೂರು ಪಾತ್ರಗಳು -ಎಂ. ಜಿ. ಬಿರಾದಾರ

೬೮ ಯೋಜನೆಗಳೇಕೆ ಬೇಕು ? -ಎಸ್. ಎಸ್. ಯಮ್ಮಿ

೬೯ ಸಗರನಾಡಿನ ಶಿವಶರಣರು -ವ್ಹಿ. ಶಿವಾನಂದ

೭೦ ವಿಜ್ಞಾನದ ದೃಷ್ಟಿಯಲ್ಲಿ ಸೃಷ್ಟಿ .ಆರ್.ಎಸ್.ಭೂಸನೂರಮಠ

೭೧ ವಿಜಯನಗರದ ನಿರ್ಣಾಯಕ ಯುದ್ಧ- ಎಸ್. ಬಿ. ಕೋಡದ

೭೨ ಬಸವಣ್ಣನವರನ್ನು ಕುರಿತ ಶಾಸನಗಳು -ಎಂ.ಎಂ.ಕಲಬುರ್ಗಿ

೭೩ ಆಧುನಿಕ ಭಾಷಾ ವಿಜ್ಞಾನ -ಜೆ. ಎಸ್. ಕುಳ್ಳಿ

೭೪ ಪುರಾಣ ಜಿಜ್ಞಾಸೆ -ಎಲ್. ಆರ್. ಹೆಗಡೆ

೭೫ ಭಾರತದಲ್ಲಿ ಶೈಕ್ಷಣಿಕ ಪ್ರಯೋಗ -ವ್ಹಿ. ಎಸ್. ಕುಲಕರ್ಣಿ

೭೬ ಅಧಿಕ ಉತ್ಪಾದನೆಗಾಗಿ ಮಿಶ್ರತಳಿ ಬೆಳೆಗಳು -ಎ. ಸಿ. ಕಲ್ಯಾಣಿಮಠ

೭೭ ಕನ್ನಡ ನುಡಿಯ ಬೆಳವಣಿಗೆ ಎಚ್. ಜಿ. ಲೋಕೂರ

೭೮ ಹರಿಹರನ ಗಿರಿಜಾಕಲ್ಯಾಣ -ಬಿ. ವ್ಹಿ. ಶಿರೂರ

೭೯ ಹೊಟ್ಟೆಯ ಹುಣ್ಣು -ಪಿ. ಎಸ್. ಶಂಕರ

೮೦ ಸಂಯೋಜಕ ಶಕ್ತಿ -ಬಿ. ಜಿ. ಜ್ಯೋತಿ

೮೧ ಸಂಸದೀಯ ಸರಕಾರ ಭಾರತಕ್ಕೆ ಒಪ್ಪುವದೇ ? -ವಸಂತ ಪಾಟೀಲ

೮೨ ನಮ್ಮ ರೈತರೇಕೆ ಹಿಂದುಳಿದಿದ್ದಾರೆ ? -ಎಂ. ಸಿ. ಕೊಡ್ಲಿ

೮೩ ನಗೆಗಾರ ನಯಸೇನ -ಎಂ. ಎಸ್. ಸುಂಕಾಪುರ

೮೪ ಶೂನ್ಯ ಸಂಪಾದನೆ -ವ್ಹಿ. ಎಸ್. ಕಂಬಿ

೮೫ ಮಹಮೂದ ಗವಾನ -ಎಲ್. ಆರ್. ಕುಲಕರ್ಣಿ

೮೬ ಕೆಳದಿಯ ನಾಯಕರು -ಜಿ. ಎಸ್. ದೀಕ್ಷಿತ

೮೭ ಮುಳುಗುಂದ ನಾಡು -ಎಸ್. ಎಚ್. ರಿತ್ತಿ

೮೮ ಶ್ವಾಸಕೋಶ ಕ್ಷಯ -ಪಿ. ಎಸ್. ಶಂಕರ

೮೯ ಕರ್ನಾಟಕದಲ್ಲಿ ಗ್ರಂಥಾಲಯಗಳು -ಎಸ್. ಆರ್. ಗುಂಜಾಳ

೯೦ ಮಿರ್ಜಾ ಘಾಲಿಬ್ -ಅಬ್ದುಲ್ ಮಜೀದ್‌ಖಾನ್

೯೧ ಕಬೀರದಾಸ -ಬಸವಯ್ಯಾ ಶಿರೋಳ

೯೨ ಬ್ಯಾಂಕುಗಳ ರಾಷ್ಟ್ರೀಕರಣ -ಎಸ್. ಜಿ, ಕರಭಂಟನಾಳ

ಬೆಲೆ: ಪ್ರತಿ ಒಂದಕ್ಕೆ ೨೫ ಪೈಸೆ